# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಬಾಲ ಘಟೋತ್ಕಚ

ಕವಿ

## ಕೊರ್ಗಿ ಸೂರ್ಯನಾರಾಯಣ ಉಪಾಧ್ಯಾಯ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪ್ರಜ್ಞಾದೀಪ್ತಿ ಪ್ರಕಾಶನ, ಕಟೀಲು, ಮಂಗಳೂರು

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೪೪೭

**ಪಾತ್ರಗಳು:**

ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ, ಕುಂತೀ, ಹಿಡಿಂಬಾ, ಶಂಬರಾಸುರ, ತಾಮ್ರಾಕ್ಷ, ಖರಗ್ರೀವ, ಸೂಲಗಿತ್ತಿ ತಿಪ್ಪವ್ವ, ಜಾಲಿ, ಕುಡುಕ, ಬಾಣಾಸುರ, ಕುಂಭಾಂಡ, ಗುಪ್ತಚರ, ಘಟೋತ್ಕಚ, ಗುಂಜಾಕ್ಷ, ಡಂಗುರಿ, ಕಾಕತುಂಡ, ಕಪಟ ದೈವಜ್ಞ, ಶ್ರೀಕೃಷ್ಣ, ಸತ್ಯಭಾಮಾ, ಈಶ್ವರ, ಗಣಪತಿ, ಷಣ್ಮುಖ, ವೀರಭದ್ರ, ನಾರದ, ವಿದ್ಯುದ್ದಂಷ್ಟ್ರ

**ಕಥಾಸಾರಾಂಶ:**

ಭೀಮ ಹಾಗೂ ಹಿಡಿಂಬೆಯರ ಸಮಾಗಮದಿಂದ ಘಟೋತ್ಕಚನ ಜನನ. ಶಂಬರಾಸುರನ ಪತ್ನಿಯ ಗರ್ಭಕ್ಕೆ ಪಾಂಡವರ ಮಾಂಸದ ಬಯಕೆ. ಅದನ್ನು ಈಡೇರಿಸಲು ಬಾಣಾಸುರಾದಿಗಳ ಸಹಕಾರ. ಆಗ ಬಾಲಘಟೋತ್ಕಚನಿಗೂ, ಬಾಣಾಸುರಾದಿಗಳಿಗೂ ಕಾಳಗ. ಶಿವ ತನ್ನ ಗಣಗಳೊಂದಿಗೆ ಬಂದು ಬಾಣಾಸುರನಿಗೆ ಸಹಾಯ ಮಾಡುವುದು. ಇತ್ತ ಶ್ರೀಕೃಷ್ಣ ಪರಿವಾರಸಹಿತ ಪಾಂಡವರ ಒತ್ತಾಸೆಗೆ ಬರುವುದು. ಕೊನೆಗೆ ಬಾಲ ಘಟೋತ್ಕಚನ ಸಾಹಸಕ್ಕೆ ಎಲ್ಲರೂ ಮೆಚ್ಚುವುದು. ದುಷ್ಟರ ನಿಗ್ರಹವೇ ಮೊದಲಾದ ರೋಚಕ ಸನ್ನಿವೇಶಗಳನ್ನು ಒಳಗೊಂಡ ಕಥಾನಕ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಕೊರ್ಗಿ ಸೂರ್ಯನಾರಾಯಣ ಉಪಾಧ್ಯರು (ಕ್ರಿ.ಶ. ೧೯೧೨ – ೧೯೭೪) ವಿದ್ವಾಂಸರು, ಪುರೋಹಿತರು, ಜ್ಯೋತಿಷಿಗಳು ಆಗಿದ್ದರು. ಇವರ ತಂದೆ ಸೀತಾರಾಮ ಉಪಾಧ್ಯಾಯ, ತಾಯಿ ಶಂಕರಿ, ಅಣ್ಣ ಲಕ್ಷ್ಮೀನಾರಾಯಣ ಉಪಾಧ್ಯಾಯ. ಕೊರ್ಗಿ ವೆಂಕಟೇಶ ಉಪಾಧ್ಯಾಯ ಮತ್ತು ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಇವರ ಮಕ್ಕಳು. ಇವರು ಯಕ್ಷಗಾನ ಮೇಳಗಳಲ್ಲಿ ತಿರುಗಾಟ ನಡೆಸಿದವರು. ಅನೇಕ ಯಕ್ಷಗಾನ ಸಂಘಗಳನ್ನು ಹುಟ್ಟಿಹಾಕಿ ಅಪಾರ ಸಂಖ್ಯೆಯ ಶಿಷ್ಯರನ್ನು ಪಡೆದರು. ಯಕ್ಷಗಾನ ಪ್ರಸಂಗಗನ್ನಲ್ಲದೇ ಅಸಂಖ್ಯ ಕೀರ್ತನೆಗಳನ್ನು ಮತ್ತು ನಾಟಕಗಳನ್ನೂ ರಚಿಸಿದ್ದರು.

ಇವರು ಬರೆದ ಪ್ರಸಂಗಗಳು: ಧರಣಿಮೋಹಿನಿ ಕಲ್ಯಾಣ, ಅಶೋಕಸುಂದರಿ ಕಲ್ಯಾಣ, ನಹುಷೋಪಾಖ್ಯಾನ, ಗುರುದ್ರೋಣ, ಬಾಲ ಘಟೋತ್ಕಚ, ಭೈಮ್ಯುತ್ಪತ್ತಿ, ಯಾಮಾಗ್ನಿಯರ ಕಾಳಗ, ಮೋಹಿನೀ ಕಲ್ಯಾಣ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲ ವಿಕ್ರೀಡಿತ ವೃತ್ತ**
ಶ್ರೀ ಮಾಹೇಶ್ವರ ಚಾಪಭಂಜನಕರಂ | ಕೌಮೋದಕೀ ಧಾರಿಣಂ|
ಸೋಮಾರ್ಕಾದಿ ಸುರೌಘವಂದಿತಪದಂ | ಕಾಮಾರಿಮಿತ್ರಂ ಹರಿಂ ||
ಹೇಮಾಕ್ಷಾದಿ ವಿನಾಶನಂ ಸುರುಚಿರಂ | ದಾಮೋದರಂ ಧಾರ್ಮಿಕಂ |
ಭೂಮೀಶಂ ಕುಜನಾಂಧಕಾರಮಿಹಿರಂ | ರಾಮಂ ಸದಾ ಭಾವಯೇ || ೧ || ೧ ||

**ಭಾಮಿನಿ**
ಗುರು ಗಣಪ ವಾಕ್ ಶ್ರೀ ಶಿವಾ ವಿಧಿ |
ಹರಿಹರಾರ್ಕ ಹಿಮಾಂಶು ಕುಜ ಬುಧ |
ಗುರುಸಿತಾರ್ಕಿ ಕರಾಳಮೊಗ ಕೇತ್ವಿಂದ್ರ ಶುಚಿಯಮರ ||
ನಿಋುತಿ ವರುಣ ಸಮೀರ ದರ್ಪಕ |
ಹರ ಸುಹೃದನೀಶಾನ ಷಣ್ಮುಖ |
ಮರುತಸುತ ಮೊದಲಾದವರ ಬಲಬಂದು ವಿರಚಿಸುವೆ || ೧ || ೨ ||

**(ನೇಪಥ್ಯ)**

**ವಾರ್ಧಕ**
ಕಪ್ಪೊಡೆಯನನ್ವಯಕ್ಕೊಪ್ಪುವನೆ ಕೇಳ್ ಪಗಲ್ |
ಕಪ್ಪು ತಿಳಿಯದನ ಮಗ ಕಪ್ಪು ಹಗೆ ಮಗನು ಸಹ |
ಕಪ್ಪದಾಸೆಯೊಳು ಮುದುಕಪ್ಪ ನಿಂ ಪಾಂಡವರ ಕಪ್ಪು ಮನೆಗಟ್ಟಲಲ್ಲಿ ||
ಕಪ್ಪು ಹೊತ್ತಲಿ ಕಪ್ಪುಗೊರಳನಂತಿಹ ಭೀಮ |
ಕಪ್ಪರಿಸುತ್ತೈವರಂ ಕಪ್ಪು ತಿರುಗನ ಕೊಂದು |
ಕಪ್ಪು ಮೈಮಗ ವ್ಯಾಸನಪ್ಪಣೆಯೊಳು ಹಿಡಿಂಬೆಗಪ್ಪ ಮದುವೆಯ ಗೈಸಿದಂ || ೧ || ೩ ||

**ಕಂದ**
ಗಾಂಧರ್ವವಿವಾಹವ ಗೈ |
ದಂದಾ ನಿಶಿಯೊಳು ಹಿಡಿಂಬ ಖಳನರಮನೆಯೊಳ್ ||
ಚಂದದಿ ಭೋಜನ ತೀರಲ್ |
ಗಂಧವಹೋದ್ಭವನು ಕ್ರೀಡೆಗವಳೊಡನೆದ್ದಂ || ೧ || ೪ ||

**ಭಾಮಿನಿ**
ಇತ್ತ ಯಮಜಂ ಪಾರ್ಥಯಮಳರು |
ಮತ್ತೆ ಕುಂತಿಯು ನಿದ್ರೆಯಿಂದಿರ |
ಲತ್ತ ವಧುವರರೈದೆ ಕ್ರೀಡಾವನದ ಮಧ್ಯದಲಿ ||
ಕೆತ್ತಿಸಿದ ನವರತ್ನ ಶಶಿಕರ |
ಪುಸ್ತರದ ಮಂಟಪದಿ ಸಕಲ ಪ್ರ |
ಶಸ್ತ ವಸ್ತುಗಳಿಂದ ಕಾಮುಕನಾಗುತಿಂತೆಂದ || ೧ || ೫ ||

**(ಶೃಂಗಾರ ಪರ್ವ)**

**ಕಲ್ಯಾಣಿ - ಅಷ್ಟ**
ಬಾ ಬಾರೆ ಬಾರೆಲೆ ಕಂದರ್ಪ | ನೀಗ |
ಬೇರ್ಬೇರೆ ಬಾಣವ ಬಿಡುತಿರ್ಪ ||
ಈ ಭಾರಿ ಭಾರಿ ನಾಚಿಕೆ ತೋರ್ಪ | ವಿದ್ಯೆ |
ಬೇಡ್ವೇಡೆನ್ನೊಳು ಭೇದವೊಲಿದಿರ್ಪ || ಪ ||
ಅರವಿಂದಾಕ್ಷಿಯಶೋಕಚ್ಛದ ವರ್ಣೇ | ನೀಲ |
ಸರಸೀರುಹಾಸ್ಯೆ ಸುರತ ಪೂರ್ಣೇ ||
ಕಿರಿ ಮಲ್ಲಿಕಾದಂತೆ ಚೂತ ಕುಸುಮದ | ಗಂಧಿ |
ಸ್ಮರ ಪಂಚಶರವಾಂತ ಬಗೆಗಿಕ್ಕು ಸುಮದ || ೧ ||
ವನಿತೆಯುನ್ಮಾದರೋದನವಿನ್ನು | ಸಮ್ಮೋ |
ಹನ ಶೋಷಣಾದಿ ಮಾರಣವನ್ನು ||
ತನುವಾಂತು ಬಳಲಿ ನವೋಧೃತವನ್ನು | ಪಾವ |
ಕನ ಹತ್ತಿರದೊಳಿಟ್ಟಂತಾಗಿಹುದಿನ್ನು || ೨ ||
ಅರರೆ ಬಿಂಕದ ಸಂಕಟವಿದೇನು | ಪ್ರಿಯೇ |
ಕರಿ ಕರ ಕರದೊಳಪ್ಪಿಕೊ ನೀನು ||
ಗುರುಪಯೋಧರವೆದೆಗೊತ್ತಿ ಚುಂಬನ ತಾ | ನಿನ್ನೊ |
ಳಿರುವ ಸಾಹಸ ತೋರು ತಡವೇತಕಿತ್ತ || ೩ || ೮ ||

**ವಾರ್ಧಕ**
ಮಾರಾಸ್ತ್ರದಿಂ ಬಳಲಿ ಬೆಂಡಾಗಿ ಬೆಡಗು ಭಾ |
ಮಾರಾಶಿರಾಜ್ಞಿ ನಿಧಿ ಕಂಡಂತೆ ಬಂದವಳು |
ಮಾರುತಿಯನಪ್ಪಿ ಮುತ್ತಿಡುತ ಮುಂಡಾಡಿ ಬಗೆ ಬಗೆ ಕಾಮಕ್ರೀಡೆಗಳನು ||
ಹಾರಗಳು ಹರಿವಂತೆ ತೋಳುಗಳು ಮುರಿವಂತೆ |
ಭೂರಿ ಮದಗಜಗಳೋಲಾಡಿ ಛಲದಿಂದುಭಯ |
ರೋರೋರ್ಮೆ ಚಿಗಿದು ನೆಗೆದಾಡಿದರ್ ಬಾಡಿದರ್ ಬಳಿಕೆಂದಳೊಲಿದು ಪತಿಗೆ || ೧ || ೯ ||

**ಸುರುಟಿ - ಏಕ**
ಲಾಲಿಸು ಪ್ರಿಯ ಪತಿಯೇ | ಸುಂದರ |
ಶೀಲ ಕೃಪಾಂಬುಧಿಯೇ || ಪ ||
ಭೂಲೋಕದಿ ಪೂ |ಗೋಲನ ಜಯಿಸುವ |
ನೀಲಕಂಠ ಮತ್ |ಪಾಲಕ ದೇವನೆ || ಅ.ಪ ||
ಮುದ್ದು ಮಾತನಾಡಿ | ಮೋಡಿಯ |
ಮದ್ದು ಮಂತ್ರ ಮಾಡಿ ||
ಶುದ್ಧ ಮೌನಿಯಂ |ತಿದ್ದೆನ್ನಯ ಮನ |
ಕದ್ದು ತಿದ್ದಿ ನಿಜ | ಗೆದ್ದು ಪೊಗಳುವೆಯ || ೧ ||
ಏತಕಿಂತು ಬರಿದೇ | ನಿಷ್ಠುರ |
ಮಾತನೆನ್ನೊಳೊರೆದೇ ||
ಮಾತೆಯು ತ್ವತ್ ಸಹ |ಜಾತರೊಪ್ಪೆ ಮು |
ತ್ಪ್ರಾತನೆಂದು ತನು | ಜಾತಗೊಲಿದ ಬಗೆ || ೨ ||
ಗುರುಹಿರಿಯರ ಮತವು | ಶ್ರೇಯ |
ಸ್ಕರ ವೃದ್ಧಿಗೆ ಬಲವು ||
ತರುಣಿಯ ಮೈ ಮೊಗ | ಸಿರಿಯುಕ್ಕುತ ಕುಚ |
ಶಿರ ಕಪ್ಪೆಂದಾ | ಗಿರುವುದು ಚಿತ್ರವು || ೩ ||

ಹುಡುಗತನವೆ ನಿನಗೆ | ಲಜ್ಜೆಯು |
ಬಿಡದು ಪೇಳಲೆನಗೆ ||
ಜಡದೇಹವ ನೀ | ನೊಡಗೂಡಲು ಬಡ |
ಒಡಲುಬ್ಬಿತು ನಿಜ | ನಡೆಸಿದ ಕಾರ್ಯಕೆ || ೪ ||
ಪುರುಷರ ಕೂಡಿದರೆ | ಮೈಸಿರಿ |
ಬರುವುದಿದೆಂತರರೆ ||
ಪರಿಕಿಸಲಿಲ್ಲೀ | ಪರಿಗಳನದ್ಭುತ |
ಹರ ಹರ ಲಂಬೋ | ದರಿಯಾದೆಯಲ || ೫ || ೧೪ ||

**ಶಂಕರಾಭರಣ - ತ್ರಿವುಡೆ**

ವೇದವ್ಯಾಸನು ಮಾಡಿದಾಶೀ |
ರ್ವಾದ ಪುಣ್ಯದ ಫಲವಿದು ||
ಸಾಧಿಸಿದರಿಂತಪ್ಪುದಲ್ಲ ವೃ |
ಕೋದರನೆ ಕೇಳ್ ನಿಜವಿದು || ೧ ||
ಏನ ಹೇಳುವೆ ದೈವ ಬಲದಿಂ |
ಸೂನುವಹನೇ ತೆಗೆ ಬೆತೆ ||
ಮಾನಿನೀಮಣಿ ಬೀಜಬಲ ಬೇಕಾ |
ನೆರೆಯದಿಂತಾಯಿತೇ || ೨ ||
ಸತಿಸುತರು ಪಶು ಗೃಹಗಳೆಂಬಿವು |
ಸತತ ಋಣ ಬಂಧನವಲ ||
ಪತಿಯೆ ಧರ್ಮದಿ  ಕರ್ಮ ನಡೆಸಲು |
ಸುತನು ಜನಿಸುವ ದಿಟವಲ || ೩ ||
ಇರಲಿ ಋಣಪಾಶದಲಿ ಸಿಲುಕಿದೆ |
ವಿರಚಿಸುವುದೇನೆಂಬುದು ||
ಅರುಹು ಸಾಕುವರಾರು ನಿನ್ನನು |
ಪರಿಕಿಸಲು ಭಯಮಪ್ಪುದು || ೪ ||
ಪುತ್ರನುದಿಸುವ ತಿನಲೊಡನೆ ಬಹು |
ಕ್ಷುತ್ತಿಗೇನಿದೆ ನೀಡಲು ||
ಸುತ್ತಿ ಮೃಗ ಬೇಟೆಯೊಳು ತರಬೇ |
ಕಿತ್ತು ಮಾಂಸವನೆಂದಳು || ೫ || ೧೯ ||

**ಕಾಂಬೋಧಿ - ಝಂಪೆ**

ಹರಿಯು ಭಾವನು ನನಗೆ | ಹರಗೆ ಬೆದರುವನಲ್ಲ |
ಪರಮೇಷ್ಠಿ ಮಾತಿದಂತಿರಲಿ ||
ಹಿರಿಯಯ್ಯನಂತಕನು | ಕಿರಿತಾತ ದೇವಪತಿ |
ಸರುವ ದೇವನು ತಂದೆಯೆನಗೆ || ೧ ||
ಭೂರಿಗಜಗಳ ಬಲನು | ಶೂರನಾದ ಹಿಡಿಂಬ |
ಸೌರಿಪುರ ಸೇರಿದುದನರಿಯೆ ||
ಧಾರಿಣಿಯ ಸಮಭಾರ | ಭಾರ ಗದೆಯಿರಲು ಕಾಂ |
ತಾರ ಮೃಗಗಳ ಗಣನೆಯಿಹುದೇ || ೨ ||
ಕುಟ್ಟಿ ಮೃಗಗಳ ತಂದು | ಕೊಟ್ಟು ಸರ್ವರನು ಸಂ |
ತುಷ್ಟಿ ಪಡಿಸುವೆನಾದರೊಳಗೆ ||
ಜ್ಯೇಷ್ಠಾನುಜರು ಮಾತೆ | ದಟ್ಟ ನಿದ್ರೆಯೊಳಿಹರು |
ದೃಷ್ಟಿಸುವುದಾಂ ಬಪ್ಪತನಕ || ೩ || ೨೨ ||

**ಭಾಮಿನಿ**
ಅರಸ ಬಿಡು ಮಲಗಿಹರ ಚಿಂತೆಯ |
ನಿರತ ನಾನಿಹೆನೆನಲು ಭೀಮನು |
ಪೊರಟನಾರನ್ನಾರು ಸಲಹುವರಜ್ಞತೆಯಿದೆನುತ ||
ಹರಿವ ನೀರೊಡನೈತರುವ ತೃಣ |
ದೆರಕ ಸಂತೆಯ ಜನರೆರಕ ಹೆ |
ಮ್ಮರದಿ ಹಕ್ಕಿಗಳೆರಕದೋಲ್ ಸಂಸಾರಗತಿಯೆಂದ || ೧ || ೨೩ ||

**ಕಂದ**
ವಾತಾತ್ಮಜನಿಂತೆಣಿಸುತ |
ತಾ ತೆರಳಲ್ಕಾ ಹಿಡಿಂಬಿಯರಮನೆಗಾಗಳ್ ||
ಐತಂದೈವರನಾಲ |
ಸ್ಯಾತುರಭರದಿಂದ ಬಳಲಿ ನೋಡುತ್ತೀರ್ದಳ್ || ೧ || ೨೪ ||

**(ಭಯಾನಕ ಪರ್ವ)**

**ವಾರ್ಧಕ**
ಮತ್ತೆ ದೊರೆ ಕೇಳು ಮುಂಗತೆ ಹಿಡಿಂಬಾಸುರನು |
ಸತ್ತು ಮಣಿಪುರವಾಳ್ವ ಶಂಬರನ ಹೆಂಡತಿಯು |
ಪೊತ್ತ ಬಸಿರೊಳು ನೆಲಸಿ ಪ್ರಸವ ವೇದನೆಯೊದಗೆ ಸೂಲಗಿತ್ತಿಯು ಬಂದಳು ||
ಎತ್ತಿ ಕೈ ಬಸಿರ ಮೇಲಿಡೆ ಗರ್ಭದರ್ಭಕಂ |
ಸುತ್ತುತೆಂದುದು ಪಾಂಡವರ ಮಾಂಸ ಬಯಕೆಯ |
ನ್ನಿತ್ತಡೊಳ್ಳಿತು ತಪ್ಪಲಿಲ್ಲ ಬೆಳೆದೊಡಲೊಡೆದು ಬಹೆನೆನಲು ಮುದುಕಿ ಬೆದರಿ || ೧ || ೨೫ ||

**(ಶಂಬರನ ಓಲಗ)**

**ಭಾಮಿನಿ**
ಬರಲು ಸಭೆಯೊಳು ಶಂಬರಾಸುರ |
ನಿರಲು ತಾಮ್ರಾಕ್ಷಾದಿ ಮಂತ್ರೀ |
ಶ್ವರ ಖರಾನನ ವ್ಯಾಘ್ರನಖ ಮಕರಾದಿಗಳ ಸಹಿತ ||
ಬೆರಗಿನಿಂ ಮರವಟ್ಟು ಮಂಡೆಯ |
ಚರಣಕಾನಿಸಲೇನೆನಲು ಬಂ |
ದಿರುವ ಬವಣೆಯ ಪೇಳ್ವಳಾ ತಿಪ್ಪವ್ವ ಕೈ ಮುಗಿದು || ೧ || ೨೬ ||

**ಸಾರಂಗ - ಅಷ್ಟ**
ಲಾಲಿಸು ವಾಣಿಯನು | ಸಾಹಸದಿಂದ |
ಪಾಲಿಸು ರಾಣಿಯನು || ಪ ||
ಕೇಳಲಿಲ್ಲವು ನೋಡಿ |ಬಾಳಬಲ್ಲೆನು ಮುದಿ |
ಗಾಲದೊಳೇಕಿಂಥ |ಹಾಳು ಕೆಲಸವಯ್ಯ || ಅ. ಪ ||
ವರುಷವೆಂಬತ್ತೆನಗೆ | ದಿನವೂ ನೂರಾರ್ |
ಹೆರಿಗೆ ಗೈಸುವೆ ಬಾಳಿಗೆ ||
ಬರಲಿ ತಿಪ್ಪವ್ವನೆಂ |ದರೆ ಹೆತ್ತು ಬಿಡುವರೀ |
ಪರಿಯ ಕಾಣೆನು ಮಾತ |ನೊರೆದುದು ಗರ್ಭದಿ || ೧ ||
ತಂದು ಪಾಂಡವರ ಕೊಂದೆ | ಮಾಂಸದ ಪಾಕ |
ದಿಂದ ಬಯಕೆ ಹಾಕದೆ ||
ನಿಂದರಿಲ್ಲಿಯೆ ಬೆಳೆ | ದಂದವ ಕೆಡಿಸುವೆ |
ನೆಂದುದೇಂ ಗೈದರು | ಹೊಂದದು ಸುಖಮುಖ || ೨ ||

ಊರಕಾಳಮ್ಮನಿಗೆ | ತಂದವರ್ತಲೆ |
ಹಾರಿಸು ನರಬಲಿಗೆ ||
ಮಾರಮ್ಮ ದಯದಿಂದ | ಭಾರಿಯೌತಣಗೈಸಿ |
ಮಾರಾಣಿ ಕಷ್ಟವ | ಪಾರುಗಾಣಿಸಬೇಕು || ೩ || ೨೯ ||

**ಸೌರಾಷ್ಟ್ರ - ತ್ರಿವುಡೆ**
ಬಿಡು ಬಿಡೇತಕೆ ಭೀತಿ ನರರಂ |
ಪಿಡಿದು ತರುವುದಿದಾವದೊಡ್ಡಿತು |
ಮಡದಿಯಂ ಸಂತೈಸು ತರಿಸುವೆ | ತಡೆಯದೀಗ || ೧ || ೩೦ ||

**ಕೇದಾರಗೌಳ - ಅಷ್ಟ**
ಕಳುಹುತವಳ ಮಂತ್ರಿ | ಗಳೊಳೆಂದನೆನ್ನಯ |
ಲಲನೆಯ ಹರಣವನು ||
ಉಳಿಸಲು ಬೇಗದಿಂ | ದಲಿ ಹಸ್ತಿನಾವತಿ |
ನಿಲಯಕೈದುವೆನು ನಾನು || ೧ ||
ಈ ಕ್ಷುದ್ರ ಕೆಲಸಕ್ಕೆ | ರಾಕ್ಷಸೇಶ್ವರ ನೀನ |
ಪೇಕ್ಷಿಸಿ ಪೋಪುದೇಕೆ ||
ಈ ಕ್ಷಣ ತರುವೆ ನಾ | ಲಕ್ಷ್ಯವನೆಂದು ತಾ |
ಮ್ರಾಕ್ಷ ನಮಿಸಿ ಪದಕೆ || ೨ ||
ಹಸ್ತಿನಪುರದ ಸ | ಮಸ್ತ ಮನುಷ್ಯರ |
ಮಸ್ತಕ ಪಿಡಿದೆಳೆದು ||
ಸ್ವಸ್ಥದಿ ನೀವಿರಿ | ಹೊತ್ತು ತರುವೆನೆಂದ |
ಕತ್ತೆಮೊಗನು ಮಣಿದು || ೩ || ೩೩ ||

**ಮಾರವಿ - ಏಕ**
ಕೇಳುತ ಜಾಲಿಯು | ಮಾಲಿಯು ಜ್ವಾಲಿಯು |
ಶೂಲಿಯೊಲಿದ್ದಾಗ ||
ಪೇಳಿದರಾಳಿದ | ನಾಲಿಸು ಪಾಲಿಸು |
ವೀಳೆಯವನ್ನೀಗ || ೧ ||
ತಡೆದರೆ ಬಿಡುವರೆ | ಬಡಿದರೆ ಕಡಿವರೆ |
ಕೊಡುವೆವು ತಂದವರ ||
ಹುಡುಗರು ಕೆಡುವರು | ಪಡೆಯಿದು ನಡೆವುದು |
ದೃಢವಿಹುದೈ ಶೂರ || ೨ ||
ಮಾರಿಯ ಸೂರಿಯ | ತೀರಿಸು ಹಾರಿಸು |
ಭೂರಿ ಶಿರಗಳನ್ನು ||
ನಾರಿಯ ಭಾರಿಯ | ದಾರಿಯ ಕಾರಿಯ |
ಪೂರಯಿಸುವುದಿನ್ನು || ೩ || ೩೬ ||

**ವಾರ್ಧಕ**
ಭಳಿರೆ ತಾಮ್ರಾಕ್ಷೈಕ ಶೃಂಗ ದಶಕರ್ಣ ಭಲ |
ಭಳಿರೆ ಶತಬಾಹು ಕ್ಷುರದಂಷ್ಟ್ರ ತೃಣಕೇಶ ಮುದ |
ತಳೆದು ಕಾಳಿಯ ಗುಡಿಯ ನೆಲಮಾಳಿಗೆಯೊಳು ತಂದಿಟ್ಟೊರೆಯಿರೈದಿರೆನಲು ||
ತಳೆದು ನರರೂಪಮಂ ಗಜಪುರದೊಳಲ್ಲಲ್ಲಿ |
ಸುಳಿವುತರಸಿದರು ಮನೆ ಮನೆ ಪೊಕ್ಕು ಮಾಯೆಯಿಂ |
ತಿಳಿಯದವರೆಲ್ಲರೊಂದಾಗಿ ಚಿಂತಿಸುತ ಮುಂದೈದೆ ಕುಡುಕನ ಕಂಡರು || ೧ || ೩೭ ||

**(ಹಾಸ್ಯಪರ್ವ)**

**ಲಾವಣಿ - ಅಷ್ಟ**
ಹೆಂಡದ ಬಗೆಯಬ್ಬ | ದುಂಡವೃತ್ತಿಯಿದಬ್ಬ |
ಕಂಡೆ ನಾನಬ್ಬಬ್ಬ || ಪ ||
ಗಂಡು ಎಂಬುವನೊಬ್ಬ | ಕಂಡರೆ ನಾನಬ್ಬ |
ಹೆಂಡವಿದಬ್ಬಬ್ಬ || ಅ. ಪ ||
ಆಚೆ ಕಡೆಗೆ ಹೋಗಿ | ಈಚೆ ಕಡೆಗೆ ಸಾಗಿ |
ಚಾಚುತ ಮೈ ಮಂಡೆಯ ||
ನಾಚಿಕೆ ತೊರೆವುದು | ವಾಚಾಳಿಯಾಗೋದು |
ಈಚಲಮರದ್ ಹೆಂಡ || ೧ ||
ಸಂಗಡಿಗರ ಬೈದು | ಅಂಗನೆಯರ ಹೊಯ್ದು |
ಕೆಂಗಣ್ಣಿನುರಿ ತೋರಿ ||
ಲಿಂಗಜ್ಞನಪ್ಪುದು | ಮಂಗಣ್ಣನಾಗೋದು |
ತೆಂಗಿನಮರದ್‌ಹೆಂಡ || ೨ ||
ಕಾಲಡಿಯಿದ್ದುದು | ಕೇಳದೆ ಹೋಗೋದು |
ಹೇಳಿರೆ ತೋರದು ||
ಕಾಳಮೃಗಿದು ಪ್ರೀತಿ | ಬಾಳಿಕೆಗತಿಖ್ಯಾತಿ |
ತಾಳೇಯ ಮರದ್‌ಹೆಂಡ || ೩ ||
ಡೊಳ್ಳ ಬೆಳೆಸಿ ಕಾಸು | ಕಳ್ಳರು ನಿಂದಿಸು |
ತೊಳ್ಳೆರೆಂಬರು ಹೇಸು ||
ಕಳ್ಳಕುಡುಕನೆಂದು | ಮಳ್ಳ ಹೊಲೆಯನೆಂದು |
ಪೊಳ್ಳು ಮಾತಾಡುವರು || ೪ ||
ನೊರೆ ನೊರೆ ಹೆಂಡವ | ಸುರಿಸುರಿದೆದ್ದವ |
ಕರೆಕರೆ ಬಿಡಲಾರ ||
ಗರಗರ ತಿರುಗಿಸಿ | ದುರುದುರು ಪರಿಕಿಸಿ |
ಸರಿ ಸರಿಗೊಳಿಸುವುದು || ೫ || ೪೨ ||

**ಕಂದ**
ದಾನವರೆಲ್ಲರು ಮಾಯದಿ |
ಮಾನವರಂತೈದಿ ತಡೆದು  ಕೇಳಿದರವನಂ ||
ನೀನಾರೆಲ್ಲಿಗೆ ಪೋಗುವು |
ದೀ ನಿಶಿಯಲಿ ಪೆಸರದೇನು ಪೇಳೆನಲೆಂದಂ || ೧ || ೪೩ ||

**ಕೇದಾರಗೌಳ - ಝಂಪೆ**
ಏನ ಹೇಳುವಿರೆನ್ನೊಳು | ಆರಾದ |
ರೇನು ನೀವಾರೀಗಳು ||
ಏನೆಂದು ಸತ್ಯವನ್ನು | ಪೇಳದಿರ |
ಲಾನು ಹೇಳೆನು ಗುಟ್ಟನು || ೧ || ೪೪ ||

**ಭೈರವಿ - ಝಂಪೆ**
ಪುಂಡತನ ತೋರದಿರು | ಪಾಂಡವರು ಎಲ್ಲಿಹರು |
ಖಂಡಿತವ ಹೇಳದಿರೆ | ಮಂಡೆಯೊಡೆಯುವೆವು || ೧ || ೪೫ ||

**ಕೇದಾರಗೌಳ - ಝಂಪೆ**
ಸುಡು ರವಿಯು ಕಾಣದುದನು | ಕವಿ ಕಾಂಬ |
ನೊಡನವನು ಕಾಣದುದನು ||
ಕುಡುಕ ಕಾಂಬ ಪುರೋಚನ | ಸಂಬಳವ |
ಕೊಡಲು ಕಟ್ಟಿದೆನು ಸದನ || ೧ || ೪೬ ||

**ಭೈರವಿ - ಝಂಪೆ**
ಮನೆ ಮಠವ ಕಟ್ಟಿರುವು | ದನು ಕೇಳಿದೆವೆ ಪಾಂಡು |
ತನಯರನು ತೋರು ತೋ | ರೆನಲೆಂದನವನು || ೧ || ೪೭ ||

**ಕೇದಾರಗೌಳ - ಝಂಪೆ**
ಕುಟ್ಟಿ ಮೇಣರಗುಮನೆಯ | ಕೌರವನು |
ಕಟ್ಟಿಸುತ ಕೊಟ್ಟನಯ್ಯ ||
ದಿಟ್ಟತನದಿಂ ಪೊಕ್ಕರು | ಪಾಂಡವರು |
ಸುಟ್ಟು ಬೂದಿಯೊಲಾದರು || ೧ || ೪೮ ||

**ಭೈರವಿ - ಝಂಪೆ**
ಸುಳ್ಳನಾಡುವೆಯ ಜೀ | ವಿಲ್ಲದವರವರೆ ಹೊರ |
ಗೆಲ್ಲಿಗಾದರು ಹೋಗ | ದಲ್ಲಿ ದಹಿಸಿದರೆ || ೧ || ೪೯ ||

**ಕೇದಾರಗೌಳ - ಝಂಪೆ**
ಆರು ಜನರಿರಲು ಒಳಗೆ | ಬೆಂಕಿಯಾ |
ಗಾರವದು ಸುಟ್ಟಮೇಗೆ ||
ಚೂರೆಲುಬು ಸಿಕ್ಕದಿನ್ನು | ಕಾದೆ ಹೊರ |
ಬಾರದಂತಾನವರನು || ೧ || ೫೦ ||

**ಭಾಮಿನಿ**
ಮರುಳು ಮಾತೇಂ ತೋರಿಸೆನಲವ |
ಕರೆದುತರಲಾ ವಾರಣಾವತ |
ಕರಗಿನುರಿಗಿಕ್ಕಿದರು ಕುಡುಕನ ಖಳರು ತಿನುವುದಕೆ ||
ಉರಿಯುರಿಯು ದುಷ್ಕೃತಿಗಳೆನ್ನನು |
ಪರಿಕಿಸುತ ಮರೆಯಿರಿಯೆನುತ ಮೃತಿ |
ದೊರಕಲಸುರರು ತಿಂದು ಶಂಬರಗೆಂದರೈತಂದು || ೧ || ೫೧ ||

**ಮಧ್ಯಮಾವತಿ - ಆದಿ**
ಶಂಬರ ಕೇಳು ನಾ | ವೆಂಬ ಸಂಗತಿಯ ||
ಕುಂಭಿನಿಯೊಳು ಪಾಂಡು | ಸಂಭವರ್ ಸ್ಥಿತಿಯ || ಪ ||
ಸರುವರು ನರರೂಪ | ಧರಿಸಿ ಗುಪ್ತದೊಳು ||
ಕರಿಪುರದರಮನೆ | ಕಿರಿಮನೆಗಳೊಳು ||
ದೊರಕದ ಕುಡುಕನಿಂ | ಕುರುಹವರಿತೆವಯ್ಯ ||
ಅರಗಿನಾಲಯದೊಳ | ಗುರಿದು ಹೋದರು ಜೀಯ || ೧ || ೫೨ ||

**ಭಾಮಿನಿ**
ಕೇಳಿ ಶಂಬರ ಬಹಳ ಚಿಂತೆಯ |
ತಾಳಿ ಮಡದಿಯ ಕಾಯಲಾರದ |
ಬಾಳುವೆಯು ಫಲವಿಲ್ಲ ಸಚಿವನೆ ದಾರಿಯೇನಿದಕೆ ||
ಕೇಳು ಶೋಣಿತ ಪುರದಿ ರಾಕ್ಷಸ |
ಮೌಳಿ ಬಲಿಭವ ಬಾಣನಿಹನವ |
ನಾಳುತನಕಿದಿರಿಲ್ಲ ಸಲಹುವ ತಿಳಿಸು ನೀನೆಂದ || ೧ || ೫೩ ||

**ಕಂದ**
ಅಹುದಹುದೀ ನುಡಿ ಬಾಣನು |
ಸಹಸಿಗ ಶಿವನ ಬಲದಿಂದ ಕೈಗೂಡಿಸುವಂ ||
ವಿಹಿತದಿ ಪೋಗುವೆನೆಂದತಿ |
ವಹಿಲದಿ ಶೋಣಿತಕೆ ಬಂದು ಕಳುಹಿದ ಚರನಂ || ೧ || ೫೪ ||

**(ಬಾಣಾಸುರನ ಓಲಗ)**

**ಸೌರಾಷ್ಟ್ರ - ತ್ರಿವುಡೆ**

ಬಾಣನೆಂಬವ ಹಿಂದೆ ತಪದಲಿ |
ಸ್ಥಾಣುವನು ಮೆಚ್ಚಿಸುತ ದ್ವಾರ |
ಸ್ಥಾನ ಕಾಯುವಡಿಟ್ಟು ದಾನವ | ಶ್ರೇಣಿಸಹಿತ || ೧ ||
ಒಂದು ಸಾವಿರ ಕೈಗಳಿಂ ಹ |
ನ್ನೊಂದು ಕೋಟಿ ಮಹಾಬಲಗಳೊಡ |
ನಂದು ಕುಂಭಾಂಡಾದಿ ಮಂತ್ರಿಗ | ಳಿಂದ ಕೂಡಿ || ೨ ||
ತರಣಿಯಸ್ತಮಯದಲಿ ಬಾಣನು |
ಹರಗೆರಗುತೋಲಗದೊಳಿರೆ ಶಂಬ |
ರನ ಬರವನ್ನೊರೆದ ಚಾರಕ | ನೆರಗಿ ದೊರೆಗೆ || ೩ || ೫೭ ||

**ಮುಖಾರಿ - ಏಕ**

ಸ್ವಾಮಿ ಗೈಯುವೆನರಿಕೆ ಶರಣು | ರಾಕ್ಷಸಸಾರ್ವ |
ಭೌಮ ತಮ್ಮಯ ಪಾದಕೆ ಶರಣು || ಪ ||
ಯಾಮಿನೀಚರನು ನಿಮಗೀ ಪಿಂತೆ | ಸ್ವರ್ಗದಲಿ ಬಲ ಸಂ |
ಗ್ರಾಮಕ್ಕಿತ್ತಿರುವ ಮಿತ್ರನಂತೆ ||
ಆ ಮಣಿಪುರದಿಂ | ದೀ ಮಹಾದ್ವಾರದಿ |
ಸ್ವಾಮಿಯ ದರುಶನ | ಕಾಮಿಸಿ ಕಾದಿಹ |
ನೇಮವ ಪಾಲಿಸ | ಲಾಂ ಮತ್ತೈದಿದೆ |
ಪ್ರೇಮಿಯು ಶಂಬರ | ನಾಮಕನೆಂಬನು || ೧ || ೫೮ ||

**ಕೇದಾರಗೌಳ - ಅಷ್ಟ**

ಚರನ ಕಳುಹುತೆದ್ದು | ಹರಿತಂದಾಕ್ಷಣದಿ ಶಂ |
ಬರಗೆ ವಂದಿಸಿ ಬಾಣನು ||
ಕರಗೊಟ್ಟು ಕರೆದುಪ | ಚರಿಸುತ ಕೇಳ್ದ ಕು |
ಳ್ಳಿರಿಸಿ ಕ್ಷೇಮದ ವಾರ್ತೆಯ || ೧ || ೫೯ ||

**ಭೈರವಿ - ಅಷ್ಟ**

ಕ್ಷೇಮದಿಂದಿಹರೇನಯ್ಯ | ನಿನ್ನಯ ಬಂಧು |
ಸ್ತೋಮವೆಂತಿರುವುದಯ್ಯ ||
ನೀ ಮೊದಲಿಲ್ಲಿ ಸಂಗ್ರಾಮಕ್ಕೈತಂದು ಬಂ |
ದಾ ಮಘವನ ಗೆಲಿದಾ ಮಾತ ಕೇಳಿಹೆ || ೧ ||
ಏನಿದು ದುಗುಡವಿಂದು | ಕಂದಿದೆ ಮುಖ |
ಮೌನವ ಧರಿಸಿಹುದು ||
ಕಾಣೆನೀವರೆಗಿಂಥ | ಹಾನಿ ಬಂದುದು ದೇವ |
ಸೇನೆಯಿಂದಲೊ ಮತ್ತಾ | ಮಾನವರಿಂದಲೊ || ೨ ||
ಬಿಡು ಮನಸಿನ ತಾಪವ | ಏತಕೆ ಭೀತಿ |
ಕೊಡುವೆ ನಾನಿಗೊ ಧೈರ್ಯವ ||
ನುಡಿ ಸತ್ಯ ವಿಷಯವ | ಮೃಡನನುಗ್ರಹದಿ ಕೈ |
ಬಿಡೆನು ನಮ್ಮವರನ್ನು | ದೃಢವಿದು ನಂಬಿಕೊ || ೩ ||
ಬಳಿಕ ಶಂಬರನೆಂದನು | ಆಗದ ಕಾರ್ಯ |
ತಿಳಿಸಲು ಬಂದಿಹೆನು ||
ಇಳೆಯೊಳು ಪಾಂಡವ | ರೆಳೆತಂದು ಬಸಿರಾದ |
ಲಲನೆಗೆ ಬಯಕೆ ಗೈ | ಸಲು ನಿಶ್ಚಯಿಸಿರುವೆನು || ೪ || ೬೩ ||

**ಘಂಟಾರವ - ಅಷ್ಟ**
ಎನ್ನಿಂದಾಗದೆ | ಕುನ್ನಿ ಮಾನವರುಗ |
ಳನ್ನು ತರುವುದು | ಗಣ್ಯವೇ ಭಯ |
ವನ್ನು ಬಿಡು ಬಿಡು ಶಂಬರ || ೧ || ೬೪ ||

**ಮಧುಮಾಧವಿ - ತ್ರಿವುಡೆ**
ತರಲು ಕಳುಹಿದೆ ನಾಪ್ತಜನಮಂ |
ಕರಿಪುರಕೆ ಕೌರವರು ರಚಿಸಿದ |
ಅರಗಿನಾಲಯದಲ್ಲಿ ಪಾಂಡವ |
ರುರಿದು ಹೋದರು ದಿಟವಿದು || ೧ || ೬೫ ||

**ಘಂಟಾರವ - ಅಷ್ಟ**
ಆರು ಸಿಕ್ಕರೆ | ಧಾರಿಣಿಯಲಿ ಮತ್ತೆ ||
ಕೌರವಾದ್ಯರು | ನೂರು ಜನರಂ |
ತೀರಿಸಿದರದು ಸಾಲದೆ || ೧ || ೬೬ ||

**ಮಧುಮಾಧವಿ - ತ್ರಿವುಡೆ**
ಅರುಹಲೇನದ್ಭುತವ ಪಿಂಡವು |
ಅರಸಿಯುದರದಿ ಪಾಂಡವರ ತಲೆ |
ತರಿದು ಮಾಂಸವನೀಯದಿರಲಾಂ |
ಹರಿವೆ ಹೊಟ್ಟೆಯನೆಂದುದು || ೧ || ೬೭ ||

**ಘಂಟಾರವ - ಅಷ್ಟ**
ಹರಣಗೊಂಡಾತ | ಹರಿದಶ್ವಭವ ನೋಡು ||
ಹರನೊಳೊರೆದದ | ತರಿಸಿ ವಿಧಿಯಿಂ |
ವಿರಚಿಸೀವೆನು ತನುಗಳ || ೧ || ೬೮ ||

**ಮಧುಮಾಧವಿ - ತ್ರಿವುಡೆ**
ಕ್ಷೋಣಿಯೊಳು ಸಾಹಸದಿ ನಿನಗೆಣೆ |
ಗಾಣೆ ಲೋಕಾಂತರದ ಕೀರ್ತಿಯು |
ಬಾಣನೆಂಬವ ತ್ರಾಣಿಯೆಂಬುದು |
ಮಾಣದಡಿಗಡಿಗೆಂದನು || ೧ || ೬೯ ||

**ಕಂದ**
ಇಂತಾ ಬಾಣನ ಶಂಬರ |
ಸಂತಸದಿಂ ಪೊಗಳುವಾಗ ಗುಪ್ತದ ಚಾರಂ ||
ಮುಂತೆಸೆಯುವ ರಾತ್ರಿಂಚರ |
ಕಾಂತಂಗೊಂದಿಸುತಲಿಂತು ಪೇಳಿದನಾಗಂ || ೭೦ ||

**ಮುಖಾರಿ - ಏಕ**
ಶೋಣಿತಾಧೀಶ ಸಲಾಂ ಸ್ವಾಮಿ | ದಾನವ ಪ್ರೇಮಿ |
ಶೋಣಿತಾಧೀಶ ಸಲಾಂ ಸ್ವಾಮಿ || ಪ ||
ಗುಟ್ಟನೀಕ್ಷಿಸಲು ಪೋದವ ಜೀಯ | ದೇಶವಿದೇಶ |
ಬೆಟ್ಟಗುಡ್ಡಗಳ ಸುತ್ತಿದೆನಯ್ಯ ||
ದುಷ್ಟನಾದ ಜಗ | ಜಟ್ಟಿ ಭೀಮನಾ |
ಶಿಷ್ಟ ಹಿಂಡಿಂಬನ | ಕುಟ್ಟಿ ಹಿಡಿಂಬೆಗೆ |
ಕಟ್ಟಿ ತಾಳಿ ಮತ | ಗೆಟ್ಟು ಮದುವೆಯಾ |
ಗಿಷ್ಟದಿ ಪಾಂಡವ | ರೊಟ್ಟಿನೊಳಿರುವನು || ೧ || ೭೧ ||

**ಕೇದಾರಗೌಳ - ಅಷ್ಟ**

ಹರುಷದಿಂ ಬಹುಮಾನ | ಚರಗಿತ್ತು ಕಳುಹಿ ಶಂ |
ಬರಗೆ ಪೇಳಿದನು ಬಾಣ ||
ಹರನಿಹನೆಂಬುದು | ಸರಿಬಂತೆ ಬರಬೇಕೆ |
ತರುವೆಯ ಪೇಳು ನೀನು || ೧ ||
ಹರಣದಿಂದಿಹರೆಂಬು | ದರಿತಿರ್ದರಿಲ್ಲಿಗೆ |
ಬರುವವನಲ್ಲ ನಾನು ||
ಮರಣ ವಾರ್ತೆಯೊಳು ಮುಂ | ದರಿಯದೆ ಬಂದೆನು |
ತರುವೆನಿಷ್ಟರಿತಮೇಲೆ || ೨ ||
ತೊಂದರೆ ಬರಲೆಂತು | ಸಂದೇಹಗೊಳ್ಳದೆ |
ಬಂದು ತಿಳುಹಿಸೆನ್ನಲು ||
ವಂದಿಸಿ ಪೊರಟನ | ಲ್ಲಿಂದೈದಿ ತಾಮ್ರಾಕ್ಷ |
ಗೆಂದನೋಲಗಗೊಡುತ || ೩ || ೭೪ ||

**ವಾರ್ಧಕ**

ಕೇಳ್ಕೆ ಹಿಡಿಂಬಾವನದಿ ಪಾಂಡವರು ಬಂದು |
ಮೇಳೈಸಿರುವರೆಂದು ಗುಪ್ತಚಾರಕನಲ್ಲಿ |
ಪೇಳಿದನು ನೀನು ಜಾಲಿ ಜ್ವಾಲಿ ಮಾಲಿ ಕಲಿ ಕಲುಷ ಕರ್ಕಶರ ಕೂಡಿ ||
ಊಳಿಗವ ನಡೆಸೆನಲು ತಾಮ್ರಾಕ್ಷನೆರಗಿ ಬಹು |
ಖೂಳ ಮಾಯಾ ಮಂತ್ರ ಮೋಡಿಯನ್ನರಿತ ದೈ |
ತ್ಯಾಳಿಯಂ ನೆರಹಿ ಪೊರಮಡಲಿತ್ತಲು ಹಿಡಿಂಬೆಗುದರವೇದನೆದೋರಲು || ೧ || ೭೫ ||

**(ಕರುಣ ಪರ್ವ)**

**ದ್ವಿಪದಿ**

ಕಾಣೆನೇತಕೊ ಬರಿದೆ ಹೊಟ್ಟೆ ನೋಯುತಿದೆ ||
ಕ್ಷೀಣ ಹೊಂದಿತು ಧೈರ್ಯ ಗತಿಯೇನು ಮುಂದೆ || ೧ ||
ಭಾವ ಮೈದುನರು ನಿದ್ರೆಯೊಳಿರುವರೀಗ ||
ಭಾವಿಸಿದರೆನ್ನಿಂದ ತೀರದೀ ರೋಗ || ೨ ||
ಹೆತ್ತವಳು ವಿಧಿವಶದಿ ಬಂದಿರುವಳಿಲ್ಲ ||
ಅತ್ತೆಯನ್ನೆಬ್ಬಿಸುತ್ತೊರೆವೆನವಳಲ್ಲ || ೩ ||
ಸಿಟ್ಟು ಮಾಡುವಳೊ ನಿದ್ರೆಯ ಭಂಗಕಾಗಿ ||
ಕೆಟ್ಟ ಸೂತಕವಾಯು ಬೀಸುತಿದೆ ಸಾಗಿ || ೪ ||
ಎನ್ನಂತೆ ಹೆಂಗರುಳು ಮರುಗದಿರಳಿನ್ನು ||
ಮನ್ನಿಸದೆ ಬಿಡಳು ಕಟ್ಟುವೆ ಕಾಲುಗಳನು || ೫ ||
ತಾಯಿಯೇಳೌ ಯೆನ್ನ ಮಾಯಿಯೇಳೆನುತ ||
ಬಾಯಿ ಬಿಟ್ಟಳು ಮೆಲ್ಲನಾಯಾಸಗೊಳುತ || ೬ ||
ಕಣ್ತೆರೆದು ನೋಡಿದಳು ಮುಂದಿರುವ ಸೊಸೆಯ ||
ಕುಂತಿಯೆದ್ದೇನೆನಲು ಹೇಳಿದಳು ಪರಿಯ || ೭ || ೭೬ ||

**ನೀಲಾಂಬರಿ - ತ್ರಿವುಡೆ**

ಏತಕಿಂತುಹುದೇನಮ್ಮ | ನಿಲ್ಲದು ಪ್ರಾಣ |
ಘಾತವಾಗುವುದೀಗಮ್ಮ || ಪ ||
ಮಾತೆ ಕಂಗಾಣದು | ಮಾತನಾಡುವ ಶಕ್ತಿ |
ಹೂತುಹೋಗಿದೆ ಬೇಡ | ಸೋತೆ ನಾನಿದರಿಂದ || ಅ. ಪ. ||
ಸಂದುಸಂದುಗಳೆಲ್ಲವು | ಕಳಚಿಬೀಳು |
ವಂದದಿ ನಡುಗುವವು ||
ರಂಧ್ರ ರಂಧ್ರದಿ ಬೆವ | ರೊಂದೇ ಸಮನೆ ಚಿಮ್ಮಿ |
ಬಂಧಿಸಿ ಕಟಿಪೃಷ್ಠ | ದಿಂದ ಸಿಡಿಯುತಿಹುದು || ದೇತ || ೧ ||

ನಾರಿಯ ಜನ್ಮವನ್ನು | ಧರಿಸಿ ಪುಟ್ಟ |
ಬಾರದೆಮ್ಮರಿಗಳಿನ್ನು ||
ಸೇರಿದರ್ ಪುರುಷರ | ಸೇರಬಾರದು ಕಷ್ಟ |
ಸೈರಿಸಿ ಕುಳ್ಳಿರ | ಲಾರೆ ನಿಶ್ಚಯವಮ್ಮ || ೨ ||
ಕೋಣಸೂಕರ ವ್ರಾತವ | ತಿಂದೊಡಲೊಳು|
ಜೀರ್ಣಿಸಿಕೊಂಡಿರುವ ||
ತ್ರಾಣವೆತ್ತಡಗಿತೊ | ಕಾಣೆ ನಾನುಸಿರಾಡ |
ಲಾನೆ ಮೆಟ್ಟಿದೊಲೀಗ | ಪ್ರಾಣ ಹೋಗುವುದಯ್ಯೋ || ೩ ||
ಏನ ನಾ ಹೇಳಲವ್ವ | ಹೀಗಾಗಲು |
ಬೇನೆಯು ಬರುವುದವ್ವ ||
ಜಾಣೆ ನೀ ಧೈರ್ಯ ತಾ | ಳಾನಿಹೆನೆಂದಂದು |
ಕೋಣೆಗೊಯ್ಯುತ ಕುಂತಿ | ತಾನೆ ಸೇವಿಸಿದಳು || ೪ || ೮೬ ||

**ಭಾಮಿನಿ**

ಕುಂತಿ ಸೂತಗೃಹದಿ ತಿಳಿದಿಹ |
ತಂತ್ರ ಗೈಯುತ್ತಿರಲು ಪೊರಟಿಹ |
ಮಂತ್ರಿ ಮೊದಲಾದವರು ಮಾಯದಿ ಬಂದು ಮಲಗಿರುವ ||
ಅಂತಕನಸುತ ಪಾರ್ಥ ಯಮಳರ |
ನಂತರಿಕ್ಷದಿ ಪೊತ್ತು ಕೊಂಡೊ |
ಯ್ದಂತರಂಗದೊಳಿಟ್ಟು ಕಾಯುತ್ತೊರೆದರಸುರಂಗೆ || ೧ || ೮೭ ||

**ಜಂಜೂಟಿ - ಅಷ್ಟ**

ಕೇಳು ರಕ್ಕಸರಾಯ ನೀನು | ನಾವು |
ತಾಳಿ ಮಾಯಾರೂಪವನ್ನು ||
ಗಾಳಿಯು ತರಗೆಲೆ | ಮೇಲೆ ಹಾರಿಸುವಂತೆ ||
ಖೂಳರನು ತಂದಾಜ್ಞೆಯಂತಾ |
ಕಾಳಿಗುಡಿಯಡಿ ಜಡಿದುಬಂದೆವು || ೧ ||
ಕತ್ತಿ ಕಠಾರಿಧಾರಕರು | ನಿಂದ |
ರೊತ್ತೊತ್ತಿನಲಿ ಬಲು ಭಟರು ||
ಸುತ್ತ ದಾನವರಿರ್ಪ | ರೆತ್ತ ನೋಡಿದಡಲ್ಲಿ ||
ಮತ್ತೆ ಮಾಡುವುದೇನವರ ಕಾ |
ಯುತ್ತಲಿರುವುದೆ ಪೇಳು ಖಳಮಣಿ || ೨ ||
ಧಿರುರೆ ಮೆಚ್ಚಿದೆನು ಸಂಭ್ರಮಕೆ | ರಕ್ಕ |
ಸರ ದಂಪತಿಗಳ ದೇಗುಲಕೆ ||
ಬರಬೇಕೆನ್ನುತಲಿ ಡಂ | ಗುರ ಹೊಯ್ಸು ಕಾಳಿ ಮಂ |
ದಿರವ ಪಟ್ಟಣ ವೀಥಿಗಳ ಶೃಂ |
ಗರಿಸು ತ್ವರಿತದೊಳೆಂದ ಶಂಬರ ||೩ || ೮೦ ||

**(ಸಂಭವ ಪರ್ವ)**

**ಭಾಮಿನಿ**

ಅಪ್ಪಣೆಯನಾಂತಸುರರೆಲ್ಲರ |
ಬಪ್ಪ ತೆರ ಸಾರಿಸುತ ನರಬಲಿ |
ಗಪ್ಪ ಸನ್ನಹಗೈಸೆ ಶಂಬರನತ್ತಲಾ ಕುಂತೀ ||
ತಪ್ಪದುಪಚರಿಸಲು ಹಿಡಿಂಬೆಗೆ |
ಒಪ್ಪುವಂತಿಹ ದೇಹದಾಕೃತಿ |
ದಪ್ಪ ಮಡಕೆಯೊಲಿರುವ ಕೂದಲ ಕುವರ ಜನಿಸಿದನು || ೧ || ೯೧ ||

**ಕುಸುಮ**
ಬಾಲ ಚೀರಲು ನಡುಗೆ |
ಶೈಲವು ಘಟೋತ್ಕಚಗೆ |
ಮೂಲ ಮಾಯಾ ವಿದ್ಯೆ ಪಾಲಿಸಿದಳು ||
ಖೂಳ ಬೆಳೆದನು ಕ್ಷಣಕೆ |
ಗಾಳಿ ವರ್ಧಿಸುವಂತೆ |
ಗಾಳಿಮುಮ್ಮಗನೆಂದು ಪೇಳುವಂತೆ || ೧ || ೯೨ ||

**(ಮೃಗಯಾ)**

**ಸೌರಾಷ್ಟ್ರ - ತ್ರಿವುಡೆ**
ಅತ್ತ ಗುಂಜಾಕ್ಷಾಖ್ಯ ಶಬರನು |
ಕತ್ತಿ ಬಲೆ ಬಿಲ್ಲೀಟಿ ಶರ ಬಲ |
ಮೊತ್ತಗೂಡುತ ಬೇಟೆಯಾಡುತ | ಬಂದನಾಗ || ೧ ||
ಕಟ್ಟಿ ಬಲೆಗಳ ಕೂಗಿ ನಾಯ್ಗಳ |
ಬಿಟ್ಟು ಬಗೆ ಬಗೆ ಮೃಗಗಳನು ಬೆ |
ನ್ನಟ್ಟಿ ಕೆಡಹುತ ಕುಟ್ಟಿ ಕೊಲ್ಲುತ | ಬರಲು ಮುಂದೆ || ೨ || ೯೪ ||

**ಮಾರವಿ - ಏಕ**
ಮಾರುತಿ ಬೇಟೆಯ | ಕಾರಿಯಗೊಂಡಾ |
ಹಾರವ ಹುಡುಕುತಲೀ ||
ಹಾರುವ ಮೃಗ ಸಂ | ಹಾರವ ಮಾಡಲು |
ಕೈರಾತರು ಕನಲಿ || ೧ ||
ಎಬ್ಬಿಸಿದೆನು ನಾ | ತೆಬ್ಬನೆಳೆದೆ ನಾ |
ಸಬ್ಬಳವಿಟ್ಟವ ನಾ ||
ಹೆಬ್ಬುಲಿ ಬಿದ್ದುದು | ಕೊಬ್ಬ ನಿಲಿಸುವೆವು |
ಒಬ್ಬನೆ ಕೊಡು ನೀನು || ೨ ||
ಸತ್ತ ಹುಲಿಯ ಮಾ | ತೆತ್ತದೆ ತಲೆಯೊಳು |
ಹೊತ್ತ ಮೃಗಗಳನ್ನು ||
ಇತ್ತರೆ ಪಾಲಿಪೆ | ಮತ್ತತೆಗೌಷಧ |
ವಿತ್ತು ಕೊಲುವೆನಿನ್ನು || ೩ || ೯೭ ||

**ಶಂಕರಾಭರಣ - ಮಟ್ಟೆ**
ಭರದಿ ಶಬರ ಪತಿಯು ಮೀಸೆ | ತಿರುಹುತೆಂದನು ||
ಅರರೆ ಬಿದ್ದ ವ್ಯಾಘ್ರ ಬಿಟ್ಟು | ತೆರಳು ಪೇಳ್ವೆನು || ೧ ||
ಒದರಲೇಕೆ ಸಾರಿ ಕೊಲುವೆ | ಮದದ ಹಂಬಲ ||
ಬದಿಯೊಳಿಟ್ಟು ಮೃಗವ ಕೊಟ್ಟು | ಬದುಕು ಹೋಗೆಲ || ೨ ||
ಬೇಡರಾವು ಮಿಕವ ತಿಂದು | ಕಾಡೊಳಿಪ್ಪುದು ||
ರೂಢಿಯೆನ್ನ ಮಗನೆ ಮೃಗವ | ಬೇಡಲೊರೆವುದು || ೩ ||
ಅಸುರೆಯಾದ ಸತಿಗೆ ಮಾಂಸ | ಬಸಿರ ತುಂಬಲು ||
ಉಸುರದೆಲ್ಲ ಕೊಟ್ಟು ಬೇಟೆ | ಎಸಗು ತಿನ್ನಲು || ೪ ||
ನರರಿಗಸುರರೆರಕವೆಲ್ಲಿ | ಬರಿದೆ ಹಾಸ್ಯವು ||
ಹರಕೆ ನೀನು ಹೊತ್ತರಾವು | ತೆರುವರಲ್ಲವು || ೫ || ೧೦೨ ||

**ವಾರ್ಧಕ**
ಇಂತುಸುರಿ ಗುಂಜಾಕ್ಷ ಧುರಗೈದು ಭೀಮನಿಂ |
ದಾಂತಪಜಯವ ಶರಣು ಪೊಗಲೆಂದ ಸಹಭವರು |
ಕಾಂತಾರದಲ್ಲಿರುವರೀಗೈದುವೆನು ಸ್ಮರಿಸೆ ಬಹುದು ಕೊಡು ಮೃಗಗಳನ್ನು ||
ಸಂತಸದಿ ಮೃಗಗಳಂ ಕೊಟ್ಟು ತೆರಳಿದ ವಾಯು |
ಜಂ ತರಿದು ಫಲಪಕ್ವಗಳ ಹೊತ್ತು ಮೃಗ ಪಿಡಿವು |
ತಂ ತವಕದಲಿ ಹಿಡಿಂಬಾವನಕೆ ಬರೆ ಕಂಡು ಕುಂತಿ ಮೊರೆಯಿಟ್ಟಳಿಂತೂ || ೧ || ೧೦೩ ||

**(ಪೃಥಾಪ್ರಲಾಪ)**

**ನೀಲಾಂಬರಿ - ರೂಪಕ**
ತರಳನೆ ಮಲಗಿಹ ಸುತ ರೊ | ಬ್ಬರ ಕಾಣೆನು ಬದುಕೇತಕೆ |
ಒರೆಯುವರಾರಿಹರೇನಾ | ದರೊ ತಿಳಿಯುವುದೆಂತು ||
ಸಿರಿ ಸೌಭಾಗ್ಯವು ಪೋದರು | ಹಿರಿಯ ಯುಧಿಷ್ಠಿರ ಧರ್ಮದ |
ತರು ಪಕ್ಷಿಗಳಂದದಿ ನಾ | ವಿರುತಿಹೆವವನಿಂದ || ೧ ||
ಫಲುಗುಣ ನಮ್ಮನ್ವಯತರು | ಫಲದಂತಿಹನೆನ್ನಿಷ್ಟವ |
ಸಲಿಸಲು ಸಗ್ಗದ ವಸ್ತುವ | ನಿಳುಹಿದ ಪೂಜಿಸಲು ||
ತೋಳಲುತ ಗಿರಿ ಗುಹೆ ನಿಮ್ಮನು | ಸಲಹಿದೆನತಿ ಸಂಕಷ್ಟದಿ |
ಕಳೆದವರನು ಜೀವಿಸೆ ಕಳ | ವಳ ಸೈರಿಸೆನಿನ್ನು || ೨ ||
ಮುಕುತಿಯ ಸಾಧಿಸೆ ಮಾದ್ರಿಯು | ನಕುಲನ ಸಹದೇವನ ಪಾ |
ತಕಿಯೆಂದುಸುರಳೆ ಕೊಟ್ಟವ | ಳಕುಟಿಲತನದಿಂದ ||
ಸುಖವನು ಬಯಸದೆ ಮಕ್ಕಳ | ಮುಖಗಳ ನೋಡುತ ಬದುಕಿದೆ |
ನಕಟೆನ್ನುತ ಮರೆತೊರಗಲು | ವೃಕಕುಕ್ಷಿಯು ಕೆರಳಿ || ೩ || ೧೦೬ ||

**(ರೌದ್ರಪರ್ವ)**

**ಭಾಮಿನಿ**
ಕೇಳಿ ಮೀಸೆಯ ತಿರುಹುತಲಿ ಕ |
ಣ್ಣಾಲಿ ಕೆಂಪಡರಲ್ಕೆ ರೋಷ |
ಜ್ವಾಲೆ ಧಗಧಗಿಸುತ್ತ ಕಚಕೂಪದಲಿ ಘುಡುಘುಡಿಸಿ ||
ಖೂಳೆಯಾದ ಹಿಂಡಿಂಬೆಯುದರವ |
ಸೀಳಿ ತಹೆ ಸಹಭವರನೆನ್ನುತ |
ಪೇಳಿ ಗದೆ ತಿರುಹುತಲಿ ಗರ್ಜಿಸಿ ಮುಡಿಯ ಹಿಡಿದೆಂದ || ೧ || ೧೦೭ ||

**ಪಂತುರಾವಳಿ - ಮಟ್ಟೆ**
ತೋರು ತೋರು ಬೇಗದಿಂದಲಿ || ಪ ||
ತೋರು ನಿದ್ರಿಸುವರ ಪೊರೆವ |
ಭಾರ ಪೊತ್ತು ಕಳುಹುತೆನ್ನ ||
ಮಾರಿಯಾಗಿ ತೀರಿಸಿದೆಯ |
ನಾರಿಯೆಂದು ನಂಬಿದುದಕೆ || ೧ ||
ಅಣ್ಣನೆಲ್ಲಿ ತಮ್ಮನೆಲ್ಲಿ |
ಮಿಣ್ಣನವರ ತಿಂದು ತೇಗಿ ||
ಕಣ್ಣಬಿಡುವೆ ಬಣ್ಣಗಾತಿ |
ಮಣ್ಣಗೂಡಿಸುವೆನು ದಿಂಡೆ || ೨ ||
ಕುನ್ನಿ ಬಾಲದಂತಿದಾಯ್ತು |
ನಿನ್ನ ರೀತಿ ತಿಂದ ಹೊಟ್ಟೆ ||
ಯನ್ನು ಬಗೆದು ಶೋಧಿಸುವೆನು |
ಘನ್ನ ಘಾತಕಿಯು ನಿವಾಳಿ || ೩ || ೧೧೦ ||

**ಕಂದ**

ಮುಕ್ಕಣ್ಣನೊಲಿಂತುಸುರುತ |
ಮುಕ್ಕುವನೋ ಜಗ ಹಿಡಿಂಬೆಯನ್ನ ಯೆಳೆಯುವನೋ ||
ತಿಕ್ಕುವನೋ ಎನಲರಿಯದೆ |
ರಕ್ಕಸಿಯಣುಗನು ಪಿಡಿದಡಿ ತಡೆಯೆನುತೊರೆದಂ || ೧ || ೧೧೧ ||

**(ಶಾಂತಪರ್ವ)**

**ಸೌರಾಷ್ಟ್ರ - ಅಷ್ಟ**

ತಂದೆ ಸೈರಿಸು ನಿನ್ನ | ಕಂದನಲ್ಲವೆ ನಾನು | ತಾತ ಪೇಳು || ಪಾಶ |
ಬಂಧನ ಕಡಿವೆಯ | ಬಂಧುತ್ವ ಕೆಡಿಪೆಯ | ತಾತ ಪೇಳು || ೧ ||
ಜನಕ ಕೈಕಾಲುಗ | ಳನು ಪಿಡಿಯುವೆನೀಗ | ಅಪ್ಪ ತಾಳು || ಅಯ್ಯೋ |
ಮನಸಿನ ಬಗೆಯದು | ಕನಸಿನಂತಾದುದು || ಅಪ್ಪ ತಾಳು || ೨ ||
ಅಮ್ಮ ಹೇಳುವಳಪ್ಪ | ಸುಮ್ಮನಾಲಿಸು ಸ್ವಲ್ಪ | ತಂದೆ ಕೇಳು | ಸಿಟ್ಟ |
ನೊಮ್ಮೆ ನಿಲ್ಲಿಸು ದೇವ | ರಂ ಮೆಚ್ಚಿಸಲು ಕಾವ | ತಂದೆ ಕೇಳು || ೩ ||
ಹೆಂಡತಿಯೊಳಗಿಷ್ಟು | ಚಂಡತರದ ಸಿಟ್ಟು | ಬೇಡ ಬೇಡ || ನೋಡು |
ಲಂಡಿಗಳಿಂಗಕ್ಕು | ಪುಂಡತನವಿದಕ್ಕು | ಬೇಡ ಬೇಡ || ೪ ||
ದೂರ ಪೋದುದು ಸಿಟ್ಟು | ನಾರಿಯಳನು ಬಿಟ್ಟು | ಎಂದನಾಗ || ಮೆಚ್ಚಿ |
ವೀರರೆಲ್ಲಿಹರೆಂದು | ತೋರಬೇಕೆನಗಿಂದು | ಎಂದನಾಗ || ೫ || ೧೧೬ ||

**ನವರೋಜು - ಏಕ**

ನಾಥನೆ ಲಾಲಿಸು ಸೊಲ್ಲ | ಮತ್ |
ಪ್ರೀತನೆ ಪೇಳುವೆನೆಲ್ಲ ||
ನೀ ತೆರಳಲು ದನು | ಜಾತರು ಶಂಬರ |
ದೂತರು ಬಂದರ | ಮಾತ್ಯರ ಸಂಗಡ || ೧ ||
ಆಶರರೂ ಮಲಗಿಹರ | ಆ |
ಕಾಶದ ಮಾರ್ಗದಿ ವೀರ ||
ಆಶುಗನಂದದೊ | ಳೀಶ್ವರನಾಣೆ ಮ |
ದೀಶನೆ ಪೋದರು | ಕಾಶ್ಯಪಿಭಾರರು || ೨ || ೧೧೮ ||

**ಕೇದಾರಗೌಳ - ಝಂಪೆ**

ರಕ್ಷಿಸುವೆನೆಂದೆನ್ನನು | ಕಳುಹಿ ನಿ |
ರ್ಲಕ್ಷಿಸಿದೆ ಮಲಗಿಹರನು ||
ಭಕ್ಷಿಸುವುದೆಂದೀವುದೆ | ವಂಚಕಿಯೆ |
ಪಕ್ಷಪಾತಿಯು ಬಿಡಿಸದೆ || ೧ || ೧೧೯ ||

**ಆನಂದ ಭೈರವಿ - ಏಕ**

ಸುತ್ತುಮಾತಿದಲ್ಲ ಕಾಂತ |
ಪೊತ್ತ ಗರ್ಭದಿಂದ ಭ್ರಾಂತ ||
ಳಾದೆನು | ಕಾಣ | ದಾದೆನು || ೧ || ೧೨೦ ||

**ಕೇದಾರಗೌಳ - ಝಂಪೆ**

ಬಲ್ಲೆ ನಿನ್ನಯ ಕಣ್ಣಿಗೆ | ಗರ್ಭ ಬಂ |
ತಲ್ಲ ಪೇಳುವೆ ಯಾರಿಗೆ ||
ಖುಲ್ಲತನ ತೋರಿಸುವೆಯ | ನಮ್ಮವರ |
ನೆಲ್ಲರನು ತೀರಿಸಿದೆಯ || ೧ || ೧೨೧ ||

**ಆನಂದ ಭೈರವಿ - ಏಕ**
ಉಸಿರನಾಡಲಾರದಾದೆ |
ಕಸುವು ಬತ್ತಿ ಕುಗ್ಗಿಹೋದೆ ||
ಕದ್ದರೂ | ಅವರ್ | ಗೆದ್ದರೂ || ೧ ||೧೨೨ ||

**ಕೇದಾರಗೌಳ - ಝಂಪೆ**
ಉಸಿರಾಡದಿರಲು ಬದುಕಿ | ಎಂತಿರುವೆ |
ಉಸಿರುಸಿರು ಬೇಗ ಕಟುಕಿ ||
ವ್ಯಸನ ತಂದಿತ್ತೆಯಲ್ಲ | ಸೋದರರು |
ಅಸುರವಶರಾದರಲ್ಲ || ೧ || ೧೨೩ ||

**ಆನಂದ ಭೈರವಿ - ಏಕ**
ಎನ್ನನು ನಿಂದಿಸುವುದೇಕೆ |
ನಿನ್ನನು ನಾ ಕೂಡಿದುದಕೆ ||
ಇರುವನು | ಮಗನು | ತರುವನು || ೧ || ೧೨೪ ||

**ವಾರ್ಧಕ**
ನಿನ್ನನೇತಕೆ ಜರಿವುದೆನ್ನ ಬಾಹಿರ ಕೃತ್ಯ |
ಕನ್ಯವರ್ಣದ ಕನ್ಯೆಯನ್ನು ತರಲೇನಹುದು |
ದನ್ನರಿತುಕೊಳ್ಳಲೆಮ್ಮನ್ವಕೆ ಸಲದ ಕಾರ್ಯದ ಫಲವಿದೀಗುಂಬುದು ||
ಅನ್ನೆಗಂ ಪೇಳಿದಳು ಕ್ಷತ್ರಿಯರಿಗಾಜಿ ಮೃತಿ |
ಹೆಣ್ಣು ಜನ್ಮಕೆ ಪ್ರಸವ ಕಾಲದಲಿ ಮೃತಿ ವೈಶ್ಯ |
ಜನ್ಮಕಂಬುಧಿಯ ಗತಿ ಮೃತಿಯು ಸಾಮೀಪ್ಯವೆಂದಿರ್ಪುದನ್ನೀನರಿಯೆಯ || ೧ || ೧೨೫ ||

**ಘಂಟಾರವ - ಅಷ್ಟ**
ಎರಗುತಾಗ ಘ | ಟೋತ್ಕಚನೆಂದನು ||
ಭರದೊಳಪ್ಪಣೆ | ಕರುಣಿಸಪ್ಪನೆ |
ತರುವೆನೆಲ್ಲಿರಲವರನು || ೧ || ೧೨೬ ||

**ಶಂಕರಾಭರಣ - ಅಷ್ಟ**
ತರಳ ನಿನ್ನಿಂ ಶಕ್ತಿ ಸಾಲದು |
ಬರಿದೆ ಪೋಗುವುದೇತಕೆ ||
ತೆರಳುವೆನು ಕೇಳೊಮ್ಮೆ ಸೈರಿಸು |
ತರುವೆ ನಾಲ್ವರ ಬೇಗನೆ || ೧ || ೧೨೭ ||

**ಘಂಟಾರವ - ಅಷ್ಟ**
ಬಿಡೆನು ಸಾಹಸ | ಕೊಡಿಸೆನಗಪ್ಪಣೆ ||
ದಡಿಗರಂ ಬಡಿ | ಬಡಿದು ಭೂತಕೆ |
ಬಡಿಸಿ ಬಿಡಿಸುವೆ ಪಿತೃಗಳ || ೧ || ೧೨೮ ||

**ಮಧುಮಾಧವಿ - ತ್ರಿವುಡೆ**
ಇಂದು ಪುಟ್ಟಿದ ನಿನ್ನನರಿಗಳ |
ವೃಂದಕಟ್ಟಿದರೇನು ಫಲ ಬಿಡು |
ಬಂದುದನುಭವಿಸುವೆನು ಪೋಗುವೆ |
ನೆಂದು ಪೇಳಲು ಭೈಮಿಯು || ೧ || ೧೨೯ ||

**ಘಂಟಾರವ - ಅಷ್ಟ**
ಬಾಲ ಭಾವವೆ | ತಾಳು ತೋರಿಪೆ ಮಾಯಾ |
ಜಾಲ ವಿದ್ಯೆಯ | ಲೀಲೆಯಿಂದ ವಿ |
ಶಾಲ ಸೃಷ್ಟಿಯ ಗೈವೆನು || ೧ || ೧೩೦ ||

**(ಅದ್ಭುತ ಪರ್ವ)**

**ವಾರ್ಧಕ**
ಪರಿಕಿಸೆಂದಂಧಕಾರವ ಗೈದು ರವಗೈದು |
ಬರೆ ಗಾಳಿ ಮಳೆ ಸಿಡಿಲು ಚಪಲದಿಂ ಚಪಲದಿಂ |
ಧರೆ ನಡುಗೆ ಬಹ ಸಿಂಹ ನಾಗದಿಂನಾಗದಿಂ ಕೋಣ ಕಾಡ್ಕೋಣವೈದಿ ||
ಶರಧಿಯಂ ಗೈದನಂಬರದಿಂದ ಭರದಿಂದ |
ತೆರೆ ಮರಳಿ ಮರಳಿ ಖೇಚರನಾಗಿ ಚರನಾಗಿ |
ಮರನಮರನಾಗಿ ಸೇನೆಗಳ ತಾ ನೆಗಳಿ ತಾ ಮೆರೆಸಿ ಮರೆಸಿದ ನಮಿಸಿದ || ೧ || ೧೩೧ ||

**ಕೇದಾರಗೌಳ - ಅಷ್ಟ**
ತನುಜ ಮೆಚ್ಚಿದೆ ನಿನ್ನ | ವಿನಯ ವಿದ್ಯೆಗೆ ಕ್ಷಾಂತ್ರಿ |
ಗನುಕೂಲಿಸಿಹೆ ವೇಗದಿ ||
ಅನುಜರ ಕರೆದುತಾ | ರೆನುತಪ್ಪಣೆಯನಿತ್ತ |
ನನಿಲಸಂಭವ ಮೋದದಿ || ೧ ||
ಕಂದನು ತನ್ನಮ್ಮ | ನಿಂದ ಹರಕೆಗೊಂಡು |
ಬಂದನು ಮಣಿಪುರಕೆ ||
ಉಂದುರು ಮಾರ್ಜಾಲ | ದಂದದಿ ಮನೆ ಮನೆ |
ಯೊಂದು ಬಿಡದೆ ಪುಡುಕಿ || ೨ ||
ಸಿಕ್ಕದೆ ಮುಂದೆ ಮುಂ | ದಕ್ಕೈದಿ ದೇಗುಲ |
ಪಕ್ಕದಿ ನಿಂದಿರುವ ||
ರಕ್ಕಸರೆಡೆಯೊಳು | ಪೊಕ್ಕು ನುಸಿಯೊಲಲ್ಲಿ |
ರಲ್ಕಂಡ ನಿಜವೇಷದಿ || ೩ || ೧೩೪ ||

**(ಸಂದಿಗ್ಧ ಪರ್ವ)**

**ಮಧ್ಯಮಾವತಿ - ಆದಿ**
ನಿಜರೂಪ ಕಂಡು ಧ | ರ್ಮಜನು ಪೇಳಿದನು ||
ಸುಜನರಂದದಲಿ ಭೂ | ಭುಜರ ವೀರ್ಯಜನು ||
ಭಜಕನಾರೈ ನೀನು | ಕುಜನರ ಸ್ಥಿತಿಯು ||
ರಜನಿಯರಿಯೊಲಾಶು | ಗಜನಂತೆ ಕಲೆಯು || ೧ || ೧೩೫ ||

**ಕೇದಾರಗೌಳ - ಅಷ್ಟ**
ಹಿರಿಯಯ್ಯನಿಗೆ ನಮೋ | ಕಿರಿಯ ತಂದೆಗೆ ಜಯ |
ಕಿರಿತಾತರಿಗೆ ವಂದಿಪೆ ||
ಒರೆವೆ ಭೀಮನು ತಂದೆ | ಕುರುಹರಿಯಲು ಬಂದೆ |
ಪರಿಕಿಸಿದೆನು ನಿಮ್ಮನು || ೧ || ೧೩೬ ||

**ಶಂಕರಾಭರಣ - ಮಟ್ಟೆ**
ಪಾರ್ಥನೆಂದನು | ಅಣ್ಣ ಲಾಲಿಸು |
ಧೂರ್ತನಿಲ್ಲಿಗೆ ಬಂದನೆಮ್ಮ ಸಂ ||
ಪೂರ್ತಿಗೊಳಿಸಲು ಕಪಟಮಾತಿದು |
ವ್ಯರ್ಥ ಭೀಮಜ | ನೆಲ್ಲಿ ಬರುವುದು || ೧ || ೧೩೭ ||

**ಕೇದಾರಗೌಳ - ಅಷ್ಟ**
ದುರಿಯೋಧನನು ಕಟ್ಟಿ | ದರಗಿನ ಸದನದೊ |
ಳುರಿಯಿಂದ್ಯೆವರ ತಪ್ಪಿಸಿ ||
ಸಿರಕೈಗಳಿಂ ಪೊತ್ತು | ಪೊರೆದುದು ನಿಜವೆ ಶಂ |
ಬರ ಖಳನೊಯ್ದ ನಿಮ್ಮ || ೧ || ೧೩೮ ||

**ಶಂಕರಾಭರಣ - ಮಟ್ಟೆ**
ಶ್ವೇತವಾಹನ | ನೆಂದ ಸುಮ್ಮನೀ |
ಮಾತು ಪೇಳುವೆ | ಬಾಯಿಮುಚ್ಚು ನೀ ||
ಏತರಿಂದಲೀ | ತಿಳಿದು ಪೇಳಿದೆ |
ತಾತರೆನ್ನುವೆ | ಗುರುತದೇನಿದೆ || ೧ | ೧೩೯ ||

**ಮಧ್ಯಮಾವತಿ - ಆದಿ**
ಚಿಂತಾಕ್ರಾಂತರು ನಾವ್ಗ | ಳಹಿ ಮೆಟ್ಟಿದವರು |
ಧ್ವಾಂತದಿ ದಾಮ ಮೆಟ್ಟಲು ಬೆದರುವರು ||
ಭ್ರಾಂತರಾಗಿಹೆವು ಮಾರುತಿಯೆಲ್ಲಿರುವನು |
ಎಂತು ಪುಟ್ಟಿದೆ ಮಾತೆಯಲ್ಲಿರ್ಪಳಿನ್ನು || ೧ || ೧೪೦ ||

**ಕೇದಾರಗೌಳ - ಅಷ್ಟ**
ಮಾತುಲಾಂತಕನಿಗೆ | ಪೂತರುಕ್ಮಿಯೊಳೆನ್ನ |
ಮಾತೆಯ ಲಗ್ನಗೈಸೆ ||
ಜಾತನಾನೈತಂದೆ | ತಾತನಮ್ಮನ ಭವ |
ನ್ಮಾತೆಯ ಕಾಯ್ವನಲ್ಲಿ || ೧ || ೧೪೧ ||

**ಶಂಕರಾಭರಣ - ಮಟ್ಟೆ**
ಮರುತಭವಜನೆ | ಎದ್ದು ಕುಂಭದೋ |
ಲಿರುವ ದಟ್ಟನೆ | ಕೇಶ ನೋಡದೋ ||
ತ್ವರಿತ ವೃದ್ಧಿಯಿಂ | ತಗ್ರುಭವನಿಗೆ |
ಬರದು ನಿಶ್ಚಯ | ಕೃತ್ರಿಮವು ಮಿಗೆ || ೧ || ೧೪೨ ||

**ಭೈರವಿ - ಏಕ**
ನಕುಲನು ತಮ್ಮನಿಗೆಂದ | ಪೇಳ್ |
ಯುಕುತಿಯ ನೀನಿದಕೊಂದ ||
ವೃಕಕುಕ್ಷಿಯ ಬೀಜದಲಿ | ಜಾ |
ತಕನೆಂತೀ ರೂಪದಲಿ || ೧ || ೧೪೩ ||

**ನೀಲಾಂಬರಿ - ರೂಪಕ**
ಕಿರಿಯವನೆಂದನು ದುರುಳೆಯ ಜಠರದಿ |
ಪೊರೆದುದರಿಂದಿಂತಾ |
ಗಿರಬಹುದೆಂದು || ೧ || ೧೪೪ ||

**ಭೈರವಿ - ಏಕ**
ವ್ಯಾಸನು ಋಷಗಂಧಿಯೊಳು | ವರ |
ಭೂಸುರನಾದನು ಕೇಳು ||
ಆ ಶರಪಂಡಿತನಾವ | ಬಲ |
ವೀಸು ತಿಳಿಸು ಸಹದೇವ || ೧ || ೧೪೫ ||

**ನೀಲಾಂಬರಿ - ರೂಪಕ**
ನಮ್ಮ ನಾವರಿತರೆ | ಬ್ರಹ್ಮನ ತಿಳಿದಂತೆ ||
ಸುಮ್ಮನೇತಕೆ ವಾದ | ಒಮ್ಮನಸಿರಲು || ೧ || ೧೪೬ ||

**ಭೈರವಿ - ಏಕ**
ಶಂಬರ ಮಾಯಾ ಬಲನು | ಇವ |
ನೆಂಬುವ ಮಾತುಗಳನ್ನು ||
ನಂಬಿಗೆಗೊಳಿಸೈ ಬೀಜ | ಕ್ಷೇ |
ತ್ರಂ ಬಲವೇತಕೆ ಸಾಜ || ೧ || ೧೪೭ ||

**ನೀಲಾಂಬರಿ - ರೂಪಕ**
ಸಹದೇವನೆಂದನು | ಬಹುಪಕ್ಷವಾಶ್ರೈಸೆ |
ಸಹಭವರಮರರು | ಸಹಮೆಚ್ಚದಿರರು || ೧ || ೧೪೮ ||

**ಭಾಮಿನಿ**
ಧರ್ಮಜಂ ತಲೆದೂಗಿ ನಿಜವೆಂ |
ದೋರ್ಮೆ ಮೈದಡವುತ್ತ ಕ್ಷತ್ರಿಯ |
ಧರ್ಮ ಪುತ್ರೋತ್ಸವದಿ ಜನರಿಗೆ ಸಕ್ಕರೆಯ ಕೊಡುವ ||
ಕರ್ಮ ನಡೆಸುವರಾರು ಕೆಟ್ಟಿನ |
ಧರ್ಮ ಕೈಗೊಳಲಾರೆ ಮಗನೆ ಚ |
ತುರ್ಮುಖಾದ್ಯರು ಪಿತೃಗಳವನೀಭಾರನೆಂದೆನರೆ || ೧ || ೧೪೯ ||

**ಸಾರಂಗ - ಅಷ್ಟ**
ಯಾತಕಿಂತೊರೆವೆ ನೀನು | ನಾನಿರಲೀಗ |
ಯಾತಕಿಂತೊರೆವೆ ನೀನು ||
ಯಾತಕಿಂತೊರೆಯುವುದು ಧರ್ಮದ |
ರೀತಿಗನುಸರಿಸದಿರೆ ಭೀಮನ |
ಜಾತನಲ್ಲಾನೀಗ ನಿಮ್ಮಾಯ |
ದೂತನಂತೆಸಗುವೆನು ಕಾರ್ಯವ || ೧ ||
ತೋಷದಿ ಧರ್ಮಜನು | ಉಂಗುರವಿತ್ತು |
ಶೇಷತಲ್ಪನು ನಿನ್ನನು ||
ಪೋಷಿಸುವ ವಿಕ್ರಯಿಸಿ ಧರ್ಮದ |
ಭೂಷಣವನುಳುಹೆಂದು ಭೈಮಿಗೆ |
ಮೂಷಕಧ್ವಜನನ್ನು ಪ್ರಾರ್ಥಿಸು |
ತಾಶಿಷವ ಗೈದೊಡನೆ ಪೊರಟನು || ೨ || ೧೫೦ ||

**ಹಿಂದೂಸ್ಥಾನಿ ಕಾಪಿ - ರೂಪಕ**
ಅರಿತೊರೆದಂ | ತರದೊಳಗೆ |
ಪರಿಪರಿಯುಂ | ಗುರದಿ ಮಿಗೆ ||
ಸರಿ ಕಿರಿ ಕಿರಿ | ಕಿರಣಗಳು |
ಸುರುದ್ಧರಿದ್ವರಿ | ಗಿರಿತಗಳು || ೧ ||
ತಳ ತಳ ಪಳ | ಪಳ ಹೊಳೆತ |
ಇಳೆ ಬೆಳಗುವ | ಝಳಗೊಳುತ ||
ಬೆಲೆ ನೆಲೆ ಗೈ | ಯಲುಗೊಳಲು |
ಖಳ ಕುಲಮಯ | ನಲಿ ಕೊಡಲು || ೨ || ೧೫೧ ||

**ಕಂದ**
ಉಂಗುರವಂ ಮಯ ಕಾಣುತ |
ಅಂಗಡಿ ಸಕ್ಕರೆಯ ರಾಶಿ ರಾಶಿಗಳಿತ್ತಂ ||
ಚೆಂಗಾಣಿಪೆ ಬೇಕಾದರೆ |
ಪಿಂಗದೆ ಕೊಡು ಪೇಳ್ವ ಹಂಚುತೈದುತ್ತೊರೆದಂ || ೧೫೪ ||

**(ಹಾಸ್ಯ ಪರ್ವ)**

**ಜಿಲ್ಲಾನಿ - ಅಷ್ಟ**
ಪಾಂಡವರಿಗೆ ಪುತ್ರೋತ್ಸವವೂ | ಹೌದು |
ಖಂಡಿತವಾಗಿಹುದೀದಿನ ಶುಭವು || ಪ ||
ದೂತನಾಗಿಹೆನವರ್ ಕಡೆಯ | ತಂದೆ |
ನೈ ತಕ್ಕೊಳ್ಳಿರಿ ಕೊಡುತಿಹೆನು ಸಕ್ಕರೆಯ ||
ನೀತಿವಂತರ ಧರ್ಮ ನೋಡಿ | ಬನ್ನಿ |
ರೀತಿಯ ಬಣ್ಣಿಸಿ ಕೊಡುವೆ ಕೈನೀಡಿ || ೧ ||
ಕಾಸು ಕೊಡುವುದು ಬೇಡಪ್ಪ | ಧರ್ಮ |
ದಾಸೆಯೊಳಗೆ ಕಳುಹಿದನು ಧರ್ಮಪ್ಪ ||
ಮೋಸ ಮೂಲೆಯೊಳೊಳಗಿದ್ದು | ಬನ್ನಿ |
ಲೇಸು ವಾರತೆಯು ಸಕ್ಕರೆಯು ಸಿಕ್ಕುವುದು || ೨ ||
ಧರ್ಮಕ್ಕೆ ಸಿಗುವ ಸಕ್ಕರೆ ಢುಂ | ಸತ್ಯ |
ಧರ್ಮವ ನೆಲೆಗೊಳಿಸುವುದೀ ಸಕ್ಕರೆ ಢುಂ ||
ಧರ್ಮಪ್ಪ ಕೊಟ್ಟ ಸಕ್ಕರೆ ಢುಂ | ಪಾಪ |
ಕರ್ಮಿಗಳೆದೆ ಡಬ್ ಡಬ್ಬೆನಿಪ ಸಕ್ಕರೆ ಢುಂ || ೩ ||
ಕೊಡುತಿಂತೋಲಗಕಾಗಿ ಬಂದು | ದೈತ್ಯ |
ಗಡಣಕಿತ್ತನು ಭೀತಿಪಡಿಸುವೆನೆಂದು ||
ಸಡಗರದಿಂ ಶಂಬರನಿಗೆ | ಇತ್ತು |
ನಡೆದನು ಮೊದಲಿನಂದದಿ ಗುಹೆಯೊಳಗೆ || ೪ || ೧೫೮ ||

**(ಅನುಶಾಸನ ಪರ್ವ)**

**ಕಾಂಬೋಧಿ - ಝಂಪೆ**
ಪಿರಿಯಯ್ಯನವಧರಿಸು | ಸರುವರಿಗೆ ಕೊಟ್ಟೆ ಸ |
ಕ್ಕರೆಯ ಮಯನಿಂದ ಪಡೆದಾನು ||
ಒರೆದರಚ್ಚರಿಗೊಂಡು | ನರ ಬಲಿಯು ನಾಳೆ ಡಂ |
ಗುರ ವಾರ್ತೆಯುಂಟು ನಮಗೆಂದು || ೧ ||
ಇದು ಸಹಜ ನಿಮ್ಮನಾ | ಮದಮುಖರು ತಿಳಿಯದಂ |
ದದಲಿ ನಾಲ್ವರ ಮಾಯೆಯಿಂದ ||
ಒದಗಿನಿಂ ಕೊಂಡೊಯ್ವ | ನಿದಕೊಪ್ಪಬೇಕೆಂದು |
ಪದಕೆರಗಲಿಂತೊರೆದ ಯಮಜ || ೨ || ೧೬೦ ||

**ಸಾಂಗತ್ಯ**
ಅತಿ ಮೂರ್ಖರೆಂದು ಬಲ್ಲವರು ಪೇಳರೆ ಮುಂದೆ |
ಮತಿಗೆಟ್ಟೀ ಮೊಗ ತೋರಲಾರೆ ||
ಮತವಲ್ಲ ಚೋರರಂದದಿ ಪೋಗುವುದು ಧರ್ಮ |
ಗತಿಯು ಕೈ ಮೀರುವುದಕಟ || ೧ || ೧೬೧ ||

**ಕಾಂಬೋಧಿ - ಝಂಪೆ**
ಚೋರತನದಿಂದ ತಂ | ದೀ ರೀತಿಯೊಳು ನಿಮ್ಮ |
ತೀರಿಸಲು ನಾಳೆಯೈತಹನು ||
ಕಾರಣದಿ ಖಳಗೆ ಖಳ | ನಾ ರಚಿಸುವೆನು ಹೂಟ |
ವಾ ರಕ್ಕಸರ ಸವರಲಿಂತು || ೧ || ೧೬೨ ||

**ಸಾಂಗತ್ಯ - ರೂಪಕ**
ತರಳನೆ ವರ್ಣಸಂಕರವಾಗುವುದು ಸಿದ್ಧ |
ದುರುಳ ವೃತ್ತಿಯಗೊಂಡರಾವು ||
ಧುರಕಂಜಿದರೆ ಕ್ಷತ್ರಿಯರ ದರ್ಮವಳಿವುದು |
ಹರಣವಿದ್ದೇನು ಸಾರ್ಥಕವು || ೧ || ೧೬೩ ||

**ಕಾಂಬೋಧಿ - ಝಂಪೆ**
ತಾತ ಚಿಂತಿಪುದೇತ | ಕಾತನಂ ಕರೆಕರೆದು |
ಘಾತಿಸುವ ಸಮರಮುಖದಿಂದ ||
ಪ್ರೀತಿಯಿಂ ಕಳುಹು ನಿ | ರ್ಭೀತಿಯಿಂ ಪೋಪೆ ಸ |
ತ್ವಾತಿಶಯ ಪರಿಕಿಸೆನಲೆಂದ || ೧ || ೧೬೪ ||

**ಸಾಂಗತ್ಯ - ರೂಪಕ**
ಭೀಮಪರಾಕ್ರಮವಿದ್ದರು ಖಳರ ಸಂ |
ಗ್ರಾಮಕ್ಕೆ ನಾವೈವರಿರಲು ||
ಭೀಮನಿಲ್ಲದೆ ವ್ಯರ್ಥ ಕರೆದು ತಾರೆನಲು ಸು |
ತ್ರಾಮನ ಸುತನೆಂದ ಕನಲಿ || ೧ || ೧೬೫ ||

**ಮಾರವಿ - ಏಕ**
ಅಣ್ಣನೆ ಬಿಡು ಬಿಡು |   ಬಣ್ಣದ ಮಾತನು |
ಸಣ್ಣವನಾದಾನು ||
ಗಣ್ಯವೆ ದ್ರುಪದನ | ಕಣ್ಣೆದಿರಿತ್ತಿಹೆ |
ಮಣ್ಣಿಗೆ ಕೂಡಿಸುವೆ || ೧ ||
ಹರಿಹಯನಾಹಯ | ತುರು ಪವಿ ಬಿಳಿಕರಿ |
ತರು ಮೊದಲಾದುದನು ||
ಶರದಿಂ ಸ್ವರದಿಂ | ಧರೆಗಿಳುಹಿದುದಂ |
ಮರೆಯದೆ ಹಿಡಿ ದೃಢವ || ೨ ||
ದೇವನು ಭಾವನು | ಕಾವನು ನಮ್ಮನಿ |
ದಾವ ಕಠಿಣವಿನ್ನೂ ||
ಆವನು ದುಷ್ಟಸ್ವ | ಭಾವವ ಭಾವಿಸಿ |
ಜೀವಿಸಿದನು ಜಗದಿ || ೩ || ೧೬೬ ||

**ಸೌರಾಷ್ಟ್ರ - ತ್ರಿವುಡೆ**
ನಕುಲನೆಂದನು ಭೀಮನಿದಕೇ |
ತಕೆ ಬರುವುದವನಲ್ಲಿ ಶತಗಜ |
ಶಕುತಿಯಲ್ಲದೆ ಸೂಕ್ಷ್ಮ ಬುದ್ಧಿಯ | ಯುಕುತಿಯಿಲ್ಲ || ೧ ||
ಶುಕ್ರಶಿಷ್ಯರು ತಮ್ಮ ಮಾಯಾ |
ವಕ್ರ ಬುದ್ಧಿಯ ಯುದ್ಧ ಬಿಡರವ |
ರಕ್ರಮರು ದೊಡ್ಡಣ್ಣ ದೊಡ್ಡಮ | ನಕ್ರಮದವ || ೨ ||
ಪೋಗಿ ಕರತಹುದೇನು ಫಲ ಬಲಿ |
ಗಾಗಿ ಹೊರಗಿಕ್ಕಿದರೆ ಸಂಗರ |
ವಾಗುವುದದೆಂತಿರುವಳವ್ವೆ ಮ | ಹಾಗಹನದಿ || ೩ || ೧೭೧ ||

**ಕಂದ**
ಸಹಭವರೆಂದುದನಾಲಿಸಿ |
ಸಹದೇವಂ ಚಿಂತಿಸುತ್ತ ಪೂರ್ವಾಪರವಂ ||
ಸಹಸಿಗಳಹುದಿವರಾದರೆ |
ಸಹಜ ಸ್ಥಿತಿ ತಿಳಿಯರೇನೆಂದಿಂತೆಂದಂ || ೧ || ೧೭೨ ||

**ಖರಹರಪ್ರಿಯ - ರೂಪಕ**
ಸಾಕು ಸಾಕು ಬಿಡಿರಿ ತುಸು ವಿ | ವೇಕ ತಾಳಿರಿ ||
ಜೋಕೆಯಿಂದ ಗೆಲುವ ಮಾರ್ಗ ಬೇಕೆ ಕೇಳಿರಿ || ೧ ||
ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ||
ಹಾಗೆ ಪಂಚ ವಾಯು ಪ್ರಾಣ ಭೂತದೊಲಯ್ಯ || ೨ ||
ಪ್ರಭು ಉತ್ಸಾಹ ಮಂತ್ರಶಕ್ತಿಯುತನು ಭೀಮನು ||
ಉಭಯ ಶಕ್ತಿ ಯುಕ್ತಿಯಿಂದ ಧುರದಿ ಜಯವನು || ೩ ||
ದೊರಕಿಪುದು ಹಿಡಿಂಬೆ ಕಾವಲಲ್ಲಿ ಮಾತೆಗೆ |
ಕರೆದು ತರುವುದೆಲ್ಲ ವಿಷಯ ತಿಳುಹಿ ಭೀಮಗೆ || ೪ ||
ಬರಿದೆ ದುಡುಕಲವರಿಗಿಲ್ಲ ಚಿಂತೆಯಪ್ಪುದೀ ||
ಧುರವಿರಾಮ ಕಾಲ ತಿಳಿವುದೆಂತು ಪೂರ್ವದಿ || ೫ || ೧೭೭ ||

**ಸಾಂಗತ್ಯ - ರೂಪಕ**
ತರಣಿಪೌತ್ರನು ಪೇಳ್ದ | ಧುರಧುರಂಧರರು ನೀ |
ವರಿತಿಹೆ ಮೊದಲಾದ ರಣದಿ ||
ಅರುಹದೇತಕೆ ಗೈದೆಯೆಂದು ಕೇಳನೆ ವೃಕೋ |
ದರನು ನಿಶ್ಚಯ ನಾಳೆ ನನ್ನ || ೧ ||
ನೀತಿಯು ಜನ ಜನಕೊಂದೊಂದಾಗುವುದದು |
ರೀತಿಯಲ್ಲವು ಜಾಗ್ರತೆಯಲಿ ||
ಮಾತೆಯರೆಡೆಗೈದಿ ತಿಳುಹಿ ಸಂಗತಿಯನ್ನು |
ತಾತನ ಕರೆದು ತಾರೆಂದ || ೨ || ೧೭೮ ||

**ಕಾಂಬೋಧಿ - ಝಂಪೆ**
ನಿನ್ನನುಜ್ಞೆಯನು ನಾ | ನಿನ್ನು ಮೀರದೆ ಕಾರ್ಯ |
ವನ್ನು ಗೈಯುವೆನೆಂದು ಭೈಮೀ ||
ತನ್ನ ಕರದಿಂ ದ್ವಾರವನ್ನು ಗೈದುಮೆಯ ಬಳಿ |
ಸನ್ನುತರ ನಿಲಿಸಿ ಹೊರವಂಟ || ೧ || ೧೮೦ ||

**ಭಾಮಿನಿ**
ತ್ವರಿತದಲಿ ಹೈಡಿಂಬಿಯನಿಲನ |
ಬರವ ಹಿಂದುಳುಹುತ್ತ ಬಂದಂ |
ಬರ ಪಥದಲಿಳಿದನು ಹಿಂಡಿಂಬಾವನದ ಮಧ್ಯದಲಿ ||
ಕರೆತರುವ ನಾಲ್ವರನೆನುತ ಮೂ |
ವರು ಬರವ ಹಾರೈಸಿರಲು ಬಂ |
ದೆರಗಲೋರ್ವನೆ ಭೀಮನುರಿದೆದ್ದೊದೆದು ರೋಷದಲಿ || ೧ || ೧೮೧ ||

**(ಭೀಷಣ ಭೀಮ)**

**ಭೈರವಿ - ಅಷ್ಟ**
ನೋಡಿ ನಾಲ್ವೆಸೆಯ ತಾನು | ನಾಲ್ವರ ಪುಡು |
ಕಾಡಲೀಕ್ಷಿಸದೆಂದನು ||
ಖೋಡಿಗಳೀರ್ವರು | ಮೋಡಿ ವಿದ್ಯೆಯ ತೋರಿ |
ಕಾಡುವಿರರಿತೆನು | ಬೇಡ ನಿಮ್ಮೀಯ ಸಂಗ || ೧ ||
ಧರಣೀಭಾರಕರು ನೀವು | ಬಾಳುವುದೇಕೆ |
ಸುರವೈರಿಗಳನು ನಾವು ||
ತರಿದು ಸಂಯಮಿನಿಯ | ಪುರಕಟ್ಟುವುದು ಲೇಸು |
ತರಳ ಸತಿಯರಲ್ಲೇ | ನ್ನರಿಗಳೀಕ್ಷಿಸಲೀಗ || ೨ ||

ವೀರ ಶೂರನು ಕಂದನು | ನಾಲ್ವರ ತಂದು |
ತೋರುವೆನೆಂದೆ ನೀನು ||
ಪೋರ ದುರುಳೆ ಮೋಸ | ಗಾರರೆಲ್ಲಿಹರೆಂದು |
ತೋರೆಂದು ಗದೆಯೆತ್ತಿ ಆರುಭಟಿಸಲಾಗ || ೩ || ೧೮೪ ||

**ಕಂದ**

ಸ್ಮರಹರನೋ ದಕ್ಷನ ಮಖ |
ಹರನೋ ತ್ರಿಪುರಹರನೋ ಪ್ರಲಯಹುತವಹನೋ ||
ಅರಿಯದೆ ಕುಂತಿಯು ತಡೆಯೆಂ |
ದೊರಲಿದಳ್ ಸತಿಸುತರು ಧೊಪ್ಪನೆರಗಿದರಡಿಗಂ || ೧ || ೧೮೫ ||

**(ಆರ್ತಾಲಾಪ)**

**ನೀಲಾಂಬರಿ - ಏಕ**

ಪ್ರಾಣಪ್ರಿಯನೆ ಲಾಲಿಸು | ನಮ್ಮುಭಯರ |
ಪ್ರಾಣದಾನವ ಪಾಲಿಸು ||
ಪ್ರಾಣಾತ್ಮಭವರು ನೀವು | ಕಾಲಿಗೆ ಬಿದ್ದ |
ಪ್ರಾಣಿಗಳಹುದು ನಾವು || ೧ ||
ತಂದೆತಾಯಿಗಳು ನೀವೇ | ಮಿಕ್ಕಿರುವಿಷ್ಟ |
ಬಂಧುವರ್ಗಗಳು ನೀವೇ ||
ಬಂದು ಸೇರಿದೆ ನಿನ್ನನು | ಕೇಳುವವರಾರು |
ಕೊಂದರೆಮ್ಮುಭಯರನ್ನು || ೨ ||
ಶರಣಾಗತರ ಪೊರೆವ | ಧರ್ಮವು ಕ್ಷತ್ರಿ |
ಯರಿಗಿರಲೀ ಕ್ರೋಧವ ||
ಬರಿದೇತಕೆಸಗುವುದು | ನಿನ್ನಯ ಕಂದ |
ನೊರೆಯುವ ಕೇಳುವುದು || ೩ || ೧೮೬ ||

**ಕಂದ**

ಪೂತನೆ ಜಯಜಯ ಮಾರುತ |
ಜಾತನೆ ಜಯಜಯ ವಿಧಾತ ರೂಪನೆ ನುತಿಪೆಂ ||
ಮಾತೆಗೆ ಶಿಕ್ಷಕನದರಿಂ |
ತಾತಗೆ ಮಿಗಿಲಾದ ದೇವರಿಹದೊಳು ಶೂನ್ಯಂ || ೧ || ೧೮೯ ||

**ವಾರ್ಧಕ**

ಧರಣೀಶ ಕೇಳು ಸೌಭರಿ ಪ್ರಪಂಚವನು ಧಿ |
ಕ್ಕರಿಸಿ ಮಾಯಾ ಮೋಹ ತೊರೆದು ನೀರೊಳು ಮುಳುಗಿ |
ವಿರಚಿಸಿದ ತಪ ಹಲವು ವರುಷಮಂ ದಿನದಿ ಬಹ ಮತ್ಸ್ಯಗಳ ಬಳಗ ಕಂಡು ||
ಅರರೆ ತಿರ್ಯಗ್ಜಂತು ಮರಿಮಕ್ಕಳಿಹುದಿದಕೆ |
ನರಜನ್ಮ ಸಾರ್ಥಕಂ ತರುಣಿ ಸುತರಿಂದೆನು |
ತ್ತರುಹಿ ಮಾಂಧಾತ ನೃಪನರುವತ್ತು ಸುತೆಯರಂ ಮದುವೆಯಾದನು ಮುದದಲಿ || ೧ ||೧೯೦ ||

**ಮಧ್ಯಮಾವತಿ - ತ್ರಿವುಡೆ**

ಹರಿಣದರ್ಭಕ ನೀರೊಳೈತರೆ |
ಧರಣಿಪತಿ ಜಡಭರತ ನಿಷ್ಠೆಯ |
ತೊರೆದು ಸಲಹಿದನಧಿಕ ಮೋಹದಿ |
ತರುಣಿತನುಜರ ಬಿಡುವುದೇ || ತರದಿ ಸಾಧ್ಯ || ೧ ||
ತಣ್ಣಗಾದುದು ಕೋಪಶಿಖಿ ಸತಿ |
ಕಣ್ಣನೀರಿಂದೆತ್ತುತುಭಯರ |
ನಣ್ಣ ತಮ್ಮಂದಿರರ ನೆನೆದು ಪಿ |
ವರ್ಣಮುಖದಿಂದುಸುರಿದ || ತನ್ನ ವಿಧಿಯ || ೨ ||

ಹುಟ್ಟು ಶತಶೃಂಗಾದ್ರಿಯಲಿ ಪಿತೃ |
ನಷ್ಟ ಕಷ್ಟದಿ ಸೇರಿ ಹಾಸ್ತಿನ |
ಪಟ್ಟನದಿ ಕೌರವರ ಕಾಟಕೆ |
ಬಟ್ಟೆಗಾಣದೆ ಬಂದೆವು || ಒಟ್ಟಿನಿಂದ || ೩ || ೧೯೩ ||

**ದ್ವಿಪದಿ**
ತಂಪು ಮರದಡಿಯಿಂಪು ಖಗಮೃಗಧ್ವನಿಯು ||
ತಾಂ ಪೊರೆವೆನೆಂಬರಿಲ್ಲಿಲ್ಲಿಗೀ ಸ್ಥಿತಿಯು || ೧ ||
ಐದು ಜನರಿರಲೋರ್ವ | ನಾದೆ ನೋಡಿದೆಯ ||
ಐದುತವರನು ಸೇರ | ದುಳಿಯದೀಕಾಯ || ೨ ||
ಪಂಚಾಂಗಗಳೊಳೊಂದಿರಲ್ಕೇನು ಫಲವು ||
ಪಂಚಾಸ್ಯಗಂಜೆ ಸೇರಿದರವರ ದಿಟವು || ೩ ||
ಪಂಚೋಪವಾಯು ಪ್ರಾಣಗಳಿಂದ್ರಿಯಗಳು ||
ಪಂಚತತ್ವಗಳೆರಕದಂತೆ ನಾವುಗಳು || ೪ ||
ತಾಯಿಯಗಲಿದ ಹಸುಳೆಯೆಂತಿರುವುದೀಗ ||
ಆಯಾಸದುರಿ ತಣಿಸು ತಿಳುಹೆನಗೆ ಬೇಗ || ೫ ||
ಅಗ್ರಜಾನುಜರೆಲ್ಲರೇನಾದರೆಂದು ||
ಉಗ್ರನಡಿಯಾಣೆ ಶೀಘ್ರದಿ ಪೇಳ್ವುದಿಂದು || ೬ || ೧೯೯ ||

**ಬೇಗಡೆ - ಅಷ್ಟ**
ತಾತ ಮಣಿಪುರಕೈದಿ ಪುಡುಕಿದೆನು | ಒಂದೆಡೆಯೊಳಸುರ |
ವ್ರಾತವಾಯುಧ ಧರಿಸಿ  ಕಾವುದನು ||
ನಾ ತಿಳಿದು ನುಸಿಯಂತೆ ರೂಪವ |
ನಾತು ಗುಹೆಯೊಳು ಕಂಡೆ ನಾಲ್ವರ |
ಮಾತನಾಡಿಸಲುಂಗುರುವ ಹಿರಿ |
ತಾತನಿತ್ತನು ಪ್ರೀತಿಯಿಂದಲಿ || ೧ ||
ತೋರಿಸಲು ಸಕ್ಕರೆಯ ತಂದಿಹೆನು | ಉಂಗುರವ ಮಯನಿಗೆ |
ಮಾರಿ ಹಂಚಿದೆನಾ ಖಳರಿಗದನು ||
ಮಾರಿಗೀಯಲು ತಲೆಯ ನಾಳೆಗೆ |
ಹಾರಿಸುವರೆಂಬುದನು ತಿಳಿದಾ |
ವಾರತೆಯ ಪೇಳಿದನು ಧರ್ಮಜ |
ವೀರ ಕರೆತಾರೆಂದ ನಿನ್ನನು || ೨ ||
ಕೇಳಿ ಭೀಮನು ಮನದಲುಬ್ಬೇರಿ | ನಮಿಸುತ್ತ ಕುಂತಿಗೆ |
ಪೇಳಿದನು ಕಳುಹಮ್ಮ ದಯೆದೋರಿ ||
ಕಾಳಗದ ಸಮ್ಮೇಳನದಿ ಕಡೆ |
ಗಾಲ ಕಾಣಿಪೆ ಖೂಳರಿಗೆ ವನ |
ಮಾಲಿ ತಾ ಮೆಚ್ಚುವನು ಕರೆತಹೆ |
ಕಾಲಜಾದ್ಯರ ಕಾಲ ಕಳೆಯದೆ || ೩ || ೨೦೨ ||

**ಘಂಟಾರವ - ಝಂಪೆ**
ಕಂದರ್ಪೈವರ ಪಡೆದು | ಮಂದಭಾಗ್ಯಳು ನಾ ವ |
ಸುಂಧರೆಯ ತೊರೆದಿಲ್ಲಿ | ಇಂದು ಕಳೆದವರ ||
ನೊಂದೆ ವಾಗ್ಬಾಣಾಗ್ನಿ | ಬಂದು ದಹಿಸಿತು ಮನವು |
ಕಂದಿ ಕುಂದಿರೆ ಪೋಪು | ದಂದವೇ ಕುವರ || ೧ || ೨೦೩ ||

**ಕೇದಾರಗೌಳ - ಝಂಪೆ**
ಸಂಗರೋತ್ಸವವು ನಮಗೆ | ಸಹಭವರ |
ಸಂಗತಿಯು ತಿಳಿದ ಮೇಗೆ ||
ಹಿಂಗಳೆದು ನಿಲಲಾರೆನು | ಬಗೆ ದುಗುಡ |
ಮಂಗಳೆದು ಕಳುಹು ನೀನು || ೧ ||

ಕುಂಭೋತ್ಕಚಂ ಕುಂತಿಗೆ | ಪೇಳ್ದ ಜನ |
ಕಂ ಬರಲಿ ಕಳುಹು ಜೊತೆಗೆ ||
ಹಂಬಲಿಸದಿರು ಮನದಲಿ | ಪಾಲಕಿ ಹಿ |
ಡಿಂಬಾಂಬೆಯಿರುವಳಿಲ್ಲಿ || ೨ || ೨೦೫ ||

**ಮಧುಮಾಧವಿ - ತ್ರಿವುಡೆ**
ಎರಗುತಾಗ ಹಿಡಿಂಬೆ ಕುಂತಿಗೆ |
ಒರೆದಳಾನಿಹೆ ಭೀತಿಯೇತಕೆ |
ಅರಸ ತೆರಳಿದರೀಗ ನಾಲ್ವರ |
ಕರೆತರುವ ಸಂಶಯ ಬಿಡು || ಸಂಭ್ರಮದಲಿ || ೧ ||
ಕಾಮನೈದಂಬಿಂಗೆ ಸಿಲುಕುತ |
ಕಾಮುಕರ ಗೈಸುತ್ತ ಪುರುಷರ |
ಕಾಮಿಸುವರೆನ್ನಿರವ ಪರಿಕಿಸಿ |
ಕಾಮಿನಿಯರಿದ ಮರೆಯಲಿ || ಕಾಮಹರನೇ || ೨ ||
ದುಷ್ಟರಾವೆಂದಾರ್ಭಟಿಸಿ ಮುನಿ |
ಸೆಷ್ಟಗೈದನು ಕೊಲಲು ಯತ್ನಿಸು |
ವಷ್ಟರಲಿ ತಾಯಿಯೊಲು ತಡೆವುತ |
ಕಷ್ಟ ತಪ್ಪಿಸಿ ಪೊರೆದೆ ನೀ | ತುಷ್ಟಿಯಿಂದ || ೩ ||
ತಿಂದೆ ನಾ ಸಹಭವರನೆನ್ನುತ |
ಹೊಂದಿದಪವಾದವನು ಹೊರುವುದೆ |
ಬಂಧುಘಾತಿನಿಯಲ್ಲವೆಂಬುದು |
ಮುಂದೆ ಸತ್ಯವು ತಿಳಿವುದು || ಪೋಗಲೀಗ || ೪ || ೨೦೯ ||

**ಕೇದಾರಗೌಳ - ಝಂಪೆ**
ತಂದೆ ಹೆಂಡತಿಯಪ್ಪನು | ಅಣ್ಣ ಗುರು |
ಬಂದ ಕಷ್ಟಕೆ ದೊರೆವನು ||
ಹಂದೆಯಹರೆಂತು ವಚನ | ಮೀರಲಾ |
ನಂದವಲ್ಲೈದುವೆನು ನಾ || ೧ || ೨೧೦ ||

**ಘಂಟಾರವ - ಝಂಪೆ**
ಅರಿಗಳಾರಕೆ ಸಿಲುಕ | ದಿರು ನಾಲ್ಕುಪಾಯಗಳ |
ಮರೆಯದೆಸಗುವುದಲ್ಲಿ | ಧುರವನೆಚ್ಚರದಿ ||
ಹಿರಿಯನಿಷ್ಟವ ಮೀರ | ದೊರೆದಂತೆ ರಚಿಸುವುದು |
ತೆರಳಿ ಜಯಿಸೆಂದವಳು | ಹರಸಿ ಕಳುಹಿದಳು || ೧ || ೨೧೧ ||

**(ವೀರ ಪರ್ವ)**
**ಭೈರವಿ - ತ್ರಿವುಡೆ**
ಎದ್ದರಾಗ | ಉಭಯರು | ಎದ್ದರಾಗ ||
ಎದ್ದರಾ ಭೀಮನು ಘಟೋತ್ಕಚ |
ಕ್ರುದ್ಧತನವಂ ತಾಳುತ ||
ಯುದ್ಧದುತ್ಸಾಹಿಗಳ ಪದಹತಿ |
ಗೆದ್ದ ಕಮಠನು ಶೇಷ ತಾ ||
ಸದ್ದನಂಬಕದಿಂದ ಕೇಳುತ |
ಲಿದ್ದ ದಿಗ್ಗಜವಳುಕುತ ||
ವೃದ್ಧಶ್ರವನೇನೆಂದು ಗದ್ದಲ |
ಸುದ್ದಿಗೊಂಡನು ನರರು ತಾ ||
ಬಿದ್ದರಲುಗುತ ನಿಂತು ಕೇಳುತ |
ಬುದ್ಧಿಗೆಟ್ಟರು ಭೂಮಿ ತಾ ||
ನದ್ದುವುದು ಜಲವೆದ್ದು ಬರುವುದೊ |
ಬದ್ಧವಿದು ಗುಡುಗೆನ್ನುವಬ್ಬರ | ಕೆದ್ದರಾಗ || ೧ ||

ಬರುತಲುದಯಾಸ್ತಾದ್ರಿಯಂದದಿ |
ತರಣಿ ಶಶಿ ಹರಿ ಹರರೋ ತಾ ||
ನರಿಯಲಾತ್ಮದ್ವಯವೊ ತಿಳಿಯದು |
ಮರುತವೇಗದಿ ಬರೆ ಪಥ ||
ಕ್ಕರೆಯು ಬಾನಿರಿವಂತೆ ತಡೆಯೊ
ಡ್ಡಿರಲು ಪದದಿಂದೊದೆಯುತ ||
ಪರಿಕಿಸಲ್ಕೆರಡಾವ ಶಿಲೆಯಂ |
ಕರದೊಳೆಬ್ಬಿಸಿ ಪೊತ್ತು ತಾ ||
ವಿರದದೃಶ್ಯಾಂಜನವ ಧರಿಸುತ |
ಗಿರಿಜೆಯಾಲಯ ಸೇರುತ ||
ಭರದಿ ಬಂಧಿಸುತೊಳಗಿನಿಂ ಕದ |
ಕಿರಿಸಿ ಶಿಲೆಯನು ಯಮಜನಿದಿರೊಳು ||
ನಿಂದರಾಗ | ವಂದಿಸಿ | ನಿಂದರಾಗ || ೨ || ೨೧೩ ||

**ಭಾಮಿನಿ**
ಪರಿಕಿಸುತ ಯಮನಂದನನು ಕು |
ಳ್ಳಿರಿಸಿ ತೆರಳಿದ ಪ್ರಾಣ ಮರಳಿದು |
ದರಿಗಳಂತಕ ತಂದೆ ಬಾರೆನ್ನಾನೆ ಬಾರೆನುತ ||
ಹರುಷದಿಂದಿರಲತ್ತ ಶಂಬರ |
ವಿರಚಿಸಿದನು ಸುಧರ್ಮ ಸಭೆಯಂ |
ತರರೆ ನಟಿ ಗಾಯಕರು ಕುಣಿದರು ಹಾಡಿದರು ನಲಿದು || ೧ || ೨೧೪ ||

**ವಾರ್ಧಕ**
ಪರಿಕಿಸುತ್ತುಚಿತವನ್ನಿತ್ತು ತಾನಿತ್ತು ತಾ |
ವರೆಯಾಪ್ತ ಮಧ್ಯಾಹ್ನ ಕರದಂತೆ ಕರದಂತೆ |
ಒರೆದ ಪಾಂಡವರ ಸಕ್ಕರೆ ಬಂತು ಕರೆ ಬಂತು ಕರೆಯೊ ಕರ್ಕರೆಯೊ ತಿಳಿಯೆ ||
ಪೊರಡಬೇಕವರಿರುವ ಬಳಿಗಾಗಿ ಬಳಿಗಾಗಿ |
ಸರುವ ಸಂಗ್ರಹದಿ ನಿಗ್ರಹಕಾಗಿ ಗೃಹಕಾಗಿ |
ತರ ತರದ ತರಸ ತಂದಶನಕಂ ದಶನಕಂ ದೊರಕಿಸುವಡೇಳಿರೆನಲು || ೧ || ೨೧೫ ||

**ತುಜಾವಂತು - ಮಟ್ಟೆ**
ಪೊರಟುದಾಗ ದೈತ್ಯ ವೃಂದವು | ತೋಷದಿಂದ |
ಪೊರಟುದಾಗ ದೈತ್ಯ ವೃಂದವು || ಪ ||
ಪೊರಟುದಾಗ ದೈತ್ಯ ವೃಂದ |
ಕರಿರಥಾಶ್ವ ನಿವಹದಿಂದ |
ಮೆರೆವ ಸಕಲ ಬಿರುದಿನಿಂದ |
ಮೊರೆವ ಭೇರಿ ಕೊಂಬು ವಾದ್ಯ |
ವಿರುವ ನಾದ ಭೇದದಿಂದಲೀ || ದೀವಿಗೆಗಳು |
ಉರಿವುತೀರ್ದವೆರಡು ಕಡೆಯಲಿ || ಕಾಕತುಂಡ |
ಬರಲು ಮುಂದೆ ಪೂಜೆಗೆನುತಲಿ || ೧ ||
ಬೀಗ ತೆಗೆದು ಕಾಕತುಂಡ |
ಬಾಗಿಲುಗಳ ತೆಗೆವುದಕ್ಕೆ |
ಬಾಗಿ ಯತ್ನಿಸಿದರಸಾಧ್ಯ |
ವಾಗಲೊರೆದಡುಳಿದರೈದಿ |
ತಾಗಿ ನೋಡಿ ತಾಮ್ರುದೃಶನೊಳು || ಪೇಳ್ವಡೆಂದ|
ನಾಗದಿಂದ ತೆಗೆಸಿರೆನ್ನಲು || ಸಾಲು ಸಾಲೊ |
ಳಾಗಜಗಳು ಬಂದು ದೂಡಲು || ೨ ||

ಬಾರದಿರಲು ಪಟ್ಟುದಾನೆ |
ಕಾರ ಶಂಬರಂಗೆ ಪೇಳ್ದ |
ಭಾರಿ ಗಜದ ತಲೆಯು ರಕ್ತ |
ಸೋರುತಿಹುದಸಾಧ್ಯವೆನಲು |
ಕ್ರೂರನಚ್ಚರಿಯನು ತಳೆದನು || ಭದ್ರವಾದ |
ಕಾರಣಗಳ ಪುಡುಕುತೀರ್ದನು || ಸಚಿವರೊಳು ವಿ |
ಚಾರಿಸಿದರು ತಿಳಿಯದಾದನು || ೩ || ೨೧೮ ||

**(ಹಾಸ್ಯ ಪರ್ವ)**

**ಭಾಮಿನಿ**
ಧರಣಿಪತಿ ಕೇಳನ್ನೆಗಲ್ಲಿಗೆ |
ಧರಿಸಿ ಬಹು ಪುಸ್ತಕಗಳೋಲೆಯ |
ಕರದ ಕಂಠದ ಬಗಲ ಗಂಟಿನ ಭಸ್ಮಲೇಪನದ ||
ಕೊರಳ ಮಾಲೆಯ ಬಿಟ್ಟ ಜಡೆಯಿಂ |
ಬರಲು ನೋಟಕನಂತೆ ಭೈಮಿಯು |
ಪರಿಕಿಸುತ ಶಂಬರನು ಮನ್ನಿಸುತೊರೆದನಿಂತೆರಗಿ || ೧ || ೨೧೯ ||

**ಮಧ್ಯಮಾವತಿ - ಆದಿ**
ಅಡಿಗೆ ಮಾಡುವೆನೀಗ |  ಬಿಡದೆ ವಂದನೆಯ || ಪ ||
ನುಡಿಯನಾಲಿಪುದೆನ್ನ | ಮೃಡನು ನೀನಯ್ಯ || ಅ.ಪ. ||
ದೇಶವದಾವುದು | ದ್ವೇಶವೇಂ ಬರಲು ||
ದೇಶ ನೋಡಲು ಬಂದು| ದೇ ಶರಣೆನಲು || ೧ || ೨೨೦ |

**ಘಂಟಾರವ - ಏಕ**
ಮೆಚ್ಚಿದೆ ಮೆಚ್ಚಿದೆನು | ಇಹದೊಳು |
ಹೆಚ್ಚಿನವನು ನೀನು || ಪ ||
ಮೆಚ್ಚರಿತೆಗಳಂ | ಇಚ್ಛಿಸುವೆಯೊ ನಾ |
ನುಚ್ಚರಿಸುವೆ ಕೇ | ಳೆಚ್ಚರದಿಂದಲಿ || ಅ.ಪ. ||
ವೇದಾಂಗಗಳನ್ನು | ಪೌರಾ |
ಣಾದಿ ಶಾಸ್ತ್ರಗಳನು || ಸ್ಮೃತಿಯ |
ಷ್ಟಾದಶ ಕೃತಕವನು || ವೀಣಾ |
ಗಾಥ ನಾಟಕವನು || ಸ್ವರ್ಣಕ |
ವೈದ್ಯಕಾವ್ಯ ನಟ | ಸೂದವಲಂಕಾ |
ರಾದರದಿಂ ಕಳ | ಹಾದರ ಕಲಿತಿಹೆ || ೧ ||
ಗುರುದಕ್ಷಿಣೆಯನ್ನು | ಇತ್ತಾಂ |
ಪೊರಟು ದೇಶಗಳನು || ಹಿಮಗಿರಿ |
ಸ್ವರ ಮೊದಲೇಳರನು || ಅಯೋಧ್ಯಾ |
ಪುರ ಮೊದಲಾದುದನು || ನೋಡುತ |
ಸುರರಸುರರ್ ನರ | ವರರುಚಿತವನಿ|
ತ್ತಿರುವರು ವಿದ್ಯೆಗೆ | ಸರಿ ಬಹುದಿಹುದೇ || ೨ ||
ಕಷ್ಟದೊಳತಿ ಬಳಲು | ತ್ತಿರುವವ |
ರಿಷ್ಟವ ಸಾಧಿಸಲು || ಗುರ್ವಾ |
ದಿಷ್ಟ ವಿದ್ಯೆಯಿರಲು || ಉಪಕೃತಿ |
ಸೃಷ್ಟಿಸದಡಗಿರಲು | ಕ್ರೋಧಾ |
ವಿಷ್ಟನಪ್ಪ ಗುರು | ವಷ್ಟಮೂರ್ತಿಯದ |
ಕಿಷ್ಟು ಚರಿಸಿ ತ್ವದ್ | ದೃಷ್ಟಿಗೆ ಬಂದೆನು || ೩ || ೨೨೩ ||

**ಮಧ್ಯಮಾವತಿ - ಆದಿ**
ಸುಕೃತದಿ ಬಂದಿಹೆ | ವಿಕೃತಿ ಕವಾಟ ||
ಪ್ರಕೃತ ಹೊಂದಿರುವುದೇ | ನಕೃತದ ಕಾಟ || ೧ ||
ತಿಳುಹಿಸಬೇಕು ಚಂ | ಚಲ ಕಳೆವುದಕೆ ||
ತಿಳಿದವನೆಂದೆರ | ಗಲು ಪದಯುಗಕೆ || ೨ || ೨೨೫ ||

**ಕೊರವಿ - ಆದಿ**
ಏಳೆನ್ನುತಲಿ ಕೃ | ಪಾಳುತನದಿ ತಾ |
ಪೇಳಿದ ಪ್ರಶ್ನೆಯ ನೋಡುವ ||
ತಾಳು ಕವಡೆ ಬಗ | ಲೋಳಿಹುದದರಿಂ |
ಪೇಳುವೆ ನಿಜವನು ಕಾಡುವ || ೧ ||
ಮಂಡಿಸುತಲಿ ಗ್ರಹ | ಕುಂಡಲವಿಕ್ಕುತ |
ಪಂಡಿತ ಮಂಡಲಿ ಗಂಡನಂ ||
ಚಂಡಿಕೆ ನಮೋ ಮಾ | ರ್ತಂಡನೆ ನಮೊ ಬ್ರ |
ಹ್ಮಾಂಡೋದರಿ ಚಾಮುಂಡಿಯೆ || ೨ ||
ಇನಿತು ಜಪಿಸಿ ಝಷ | ವನಧಿಜ ಮೇಷ ಸು |
ಮನಸಸಚಿವ ಶನಿ ನೀಚನು ||
ಧನು ಭಾಗ್ಯಪನಿಹ | ತನುಪತಿ ಶಿಖಿ ನೆರೆ |
ದನುಸಿತ ಬಾಧಕನಾಥನು || ೩ ||
ಫಣಿಯನು ಕೂಡುತ ವನಿತಾಲಯದೊಳು |
ಕುಣಿಯುವ ಕೆಟ್ಟಿದೆ ಕರ್ಮವು ||
ಗುಣಿಸಿದೆ ದಾಕ್ಷಾ | ಯಣಿ ಮನಸಿನ ಮುನಿ |
ಸಣಿಯಾಗಿಹುದಿದೆ ಮರ್ಮವು || ೪ || ೨೨೯ ||

**ಸೌರಾಷ್ಟ್ರ - ತ್ರಿವುಡೆ**
ಏನು ಹೇಳುವೆ ಮಂತ್ರಮೂರ್ತಿ ಭ |
ವಾನಿಗಾಂ ಬಲಿಗೊಡಲು ನೋಡಿ |
ತ್ರೀನಿಖಿಲ ವಸ್ತುಗಳ ತಂದಿರ | ಲೇನು ಮುನಿಸು || ೧ ||
ಬೆರಳನೆಣಿಸುತ್ತೆಂದ ಕಟಿಕಕೆ |
ಸರಿಬಹುದು ಸ್ನಾನಾದಿ ಪಾನಕೆ |
ಕೊರತೆಗೈದಿರೆ ಚಿತ್ರಗೆಟ್ಟಿದೆ | ಗಿರಿಜೆಗೆಂದ || ೨ ||
ಇದಕೆ ಮುಂದೇಂಗೈವುದೆನೆ ಕುವಿ |
ಬುಧನು ರಾಶಿಯನಿಟ್ಟು ಘಟವಿ |
ನ್ನಿದರ ಫಲ ಪರಿಹರಿಸೆ ವಸ್ತುಗ | ಳೊದಗಿಸುವುದು || ೩ || ೨೩೨ ||

**ಭಾಮಿನಿ**
ಕ್ಷೀರ ದಧಿ ಘೃತ ಸಲಿಲ ಮಧು ಘಟ |
ಬೇರೆ ಬೇರೊಂದೊಂದು ಸಾವಿರ |
ನಾರಿಕೇಳಗಳಷ್ಟೆ ಸಕ್ಕರೆ ಮಣವು ಸಾವಿರವು ||
ಭೋರನೊದಗಿಸಿ ರಚಿಸಿ ಸಾಸಿರ |
ಖಾರಿ ತಂಡುಲದನ್ನ ಗರ್ಭಾ |
ಗಾರದೊಳಿಹ ಗವಾಕ್ಷದಿಂ ನೀನಿಕ್ಕು ಕ್ರಮದಂತೆ || ೧ || ೨೩೩ ||

**ಕಂದ**
ಪಂಚಾಮೃತಮಜ್ಜನದಿಂ |
ಪಂಚಾನನಸತಿಯ ಕೋಪಶಾಂತಿಯದಕ್ಕುಂ ||
ಪಂಚಸುಭಕ್ಷ್ಯಾನ್ನಗಳಿಂ |
ಪಂಚಾನನಗಮನೆ ಮೆಚ್ಚುವಳು ಜಯಮಕ್ಕುಂ || ೧ || ೨೩೪ ||

**ಕಾಂಬೋಧಿ - ಝಂಪೆ**
ಅಹುದು ಪಂಚಾಮೃತವ | ತುಹಿನೋದಕಾನ್ನ ಸಂ |
ಗ್ರಹಿಸುವೆನು ಸಕಲವನು ಬೇಗ ||
ಮಹಿಮಾನ್ವಿತನು ಪೊರಡ | ಲಹಹ ಕೊನೆಗಾಣಿಸದೆ |
ವಿಹಿತವಾಗದು ಪೋಪುದೆನಲು || ೧ ||
ಏಸು ಪೇಳಿದರು ನಾ | ನಾಸೆಯಿಂ ಬರಲಿಲ್ಲ |
ವೀ ಸಮಯ ನಿಲಲಾರೆನಯ್ಯ ||
ಲೇಸುದೋರಿದೆ ನಿನಗೆ | ಬೇಸರವದೇಕೆನುತ |
ಭೂಸುರನು ಪೊರಡಲಿಂತೆಂದ || ೨ ||
ಕೊಡುವೆನಂಬರ ಹಾರ | ಉಡುಗೊರೆಯನೆಂದಿತ್ತು |
ಒಡನೆ ಕಳುಹಲು ಕಪಟ ವಿಪ್ರ ||
ಮೃಡನೆ ಪುರಹರ ಬಾನಿ | ನೊಡೆಯ ಸಲಹೆಂದೈದೆ |
ದೃಢದಿ ಸಚಿವನೊಳೆಂದ ಖಳನು || ೩ || ೨೩೭ ||

**ವಾರ್ಧಕ**
ಕ್ಷ್ಮಾಮರಂ ಪೇಳಿದಂತೆಸಗೆ ನಿಂದಾಳ್ಗಳಂ |
ನೀ ಮೊದಲು ದಧಿಯು ಪಾಲ್ ಘೃತ ತರಲ್ ಕಳುಹೆನಲ್ |
ಆ ಮಂತ್ರಿಯು ಕುತಂತ್ರಿ ಸಾಮಜವು ತೆರಳಲವು ಹೊತ್ತು ತಂದೀಯಲಿಲ್ಲಿ ||
ನೇಮವನ್ನೀಯಲಿಂತಾಕ್ಷಣಂ ದೂತರಂ |
ತಾಮಣಿಯ ಪುರದಣಿಯ ಮನೆ ಮನೆಯ ದ್ರವ್ಯಚಯ |
ವಾ ಮದೋತ್ಕಟಗಳಿಂ ಕುಂಭ ಕುಂಭದಿ ತುಂಬುತಂಬಿಕಾಲಯಕೆ ಕಳುಹೆ || ೧ ||
ದೇಗುಲದ ಬಾಗಿಲಿನ ಮೇಲಿಹ ಗವಾಕ್ಷಕಂ |
ಬೇಗದಿಂ ಜಲನಿರ್ಗಮವನಿಟ್ಟು ಸಾಲ್ಗಟ್ಟಿ |
ದಾಗೊಡಗಳನ್ನೆಣಿಸಿ ಸುರಿದನನೇನೆಂಬೆ ಕಾಕತುಂಡನ ಸಹಸವ ||
ಆ ಘಟೋತ್ಕಚನು ಗರ್ಭಾಗಾರದೊಳು ಪೊಕ್ಕು |
ಬಾಗಿ ಮತ್ಪಿತೃಗಳಿದ ಕೈಗೊಳಿರೆನಲ್ ಭೀಮ |
ರೋಗಿ ಬಯಸಿದ ಪಾಲಿನೋಗರದೆಂಬಂತೆ ಸಾಗಿಸಿದೆ ಭಳಿರೆಂದನು || ೨ || ೨೩೮ ||

**ಕೇದಾರಗೌಳ - ಅಷ್ಟ**
ಕಂಜಾಪ್ತಪೌತ್ರನು | ಕಂಜಾಕ್ಷಿಯಳ ಪಾದ |
ಕಂಜಂಗಳಿಗೆ ಮಣಿದು ||
ಅಂಜಲಿಯಿಂ ದುಗ್ಧ | ಮಂ ಜನನಾಥನು |
ಭುಂಜಿಸೆ ಮನದಣಿದು || ೧ ||
ಪಾನ ಮಾಡಿದನರ್ಜು | ನಾ ನಕುಲನು ಮೇಲೆ |
ಕಾಣುತ ಸಹದೇವನು ||
ಸೂನು ಸಹಿತ ಪಾವ | ಮಾನಿ ಬಾಯ್ಗೊಟ್ಟನ |
ದೇನ ಬಣ್ಣಿಪೆ ಭೂವರ || ೨ ||
ದಧಿ ಭಾಂಡ ಘೃತಕುಂಭ | ಮಧುಪಾತ್ರೆಗಳ ಕಾಕ |
ವದನನು ಸುರಿಸುರಿದು ||
ಹದಗೆಟ್ಟನಿತ್ತಲಾ | ವಿಧು ವಂಶಜರು ಸೇವಿ |
ಸಿದರತಿ ಸುರಿಸುರಿದು || ೩ ||
ಶುಂಡಾಲದಿಂ ಕಾಕ | ತುಂಡನು ಶುದ್ಧಾಂಬು |
ಗೊಂಡು ವಾತಾಯನದಿ ||
ಮಂಡವ ಭಕ್ಷ್ಯವ | ಚಂಡಿಕೆಗಿತ್ತು ತಾ |
ಮಂಡಿಸಿದನು ನೆಲದಿ || ೪ ||
ಅರ್ಥವಿಲ್ಲವೆ ಛೀ ಛೀ | ಸಾರ್ಥಪ್ರಣಾಲಿತ |
ತೀರ್ಥದಿ ಸಕಲರೀಗ ||
ತೀರ್ಥವ ಕುಡಿಯಿರಿ | ವ್ಯರ್ಥವಾಗುವುದೆಂದ |
ತೀರ್ಥತಾಮ್ರಾಕ್ಷನಾಗ || ೫ || ೨೪೪ ||

**ಭಾಮಿನಿ**
ಕೇಳುತೋಡಿದರೆಲ್ಲರರ್ಚಕ |
ಬೀಳುತೇಳುತ್ತೊಡನೆ ನುಗ್ಗಿ ಪು |
ಣಾಳಿಕೆಯ ಬಳಿಯೊಂದು ಬಿಂದುಂಗಾಣದಿಂತೆಂದ ||
ಹಾಳು ಹೊಟ್ಟೆಯಿದಕಟ ಕೆಟ್ಟಿತು |
ಕಾಳಿಯೋ ಹೊರಗಾಳಿಯೋ ಯೋ |
ಗಾಳಿಯೋ ಭೂತಾಳಿಯೋ ಮೂಗಾಳಿ ತನಗೆಂದ || ೧ || ೨೪೫ ||

**ಕಂದ**
ಇತ್ತ ಮರತ್ಸುತ ನಿಘಸದಿ |
ಕ್ಷುತ್ತುಂಗಳೆವುತ್ತ ತೃಪ್ತಿಯಿಂ ಸುತಗೆಂದಂ ||
ಸತ್ತ ಮೃಗವ ಪೊತ್ತುದಕಂ |
ದಿತ್ತೆ ಮಹಾನಂದವಾಂತೆ ಮೆಚ್ಚಿದೆ ಮಗನೆ || ೧ || ೨೪೬ ||

**(ರಣಪರ್ವ)**

**ಭೈರವಿ - ಝಂಪೆ**
ಶ್ವಸನ ಸುತಸುತನೆರಗಿ | ಬಿಸಜಾಪ್ತಸುತಸುತನೊ |
ಳುಸುರಿದಂ ದನುಜರಿಹರ್ | ಮಸೆದಸಿಯ ಪಿಡಿದು || ೧ ||
ತೆಗೆದು ನಿರ್ಗಳ ಪ್ರಸ್ತ | ರಗಳ ಪ್ರತಿಬಂಧಕವೆ |
ಜಗ ನಡುಗುವಂತಾರ್ಭ | ಟೆಗಳ ನೆಗಳುವೆನು || ೨ ||
ಅಂತಾಜ್ಞೆ ದ್ವಾರೋಪ | ಲಂ ತೆಗೆದು ಮೃಗರಾಜ |
ನಂತಾರು ಜನರಲ್ಲಿ | ನಿಂತು ಗರ್ಜಿಸಲು || ೩ ||

**ಭಾಮಿನಿ**
ಭೀಕರ ಧ್ವನಿಯಿಂದ ದಶದಿ |
ಕ್ಕೋಕರಿಸಿತಚಲಂ ಚಲಿಸಲು ದಿ |
ವೌಕಸರು ಭ್ರಮಿಸಿದರು ಕಚ್ಛಪಗೆಚ್ಚರಾದುದಲ ||
ಆ ಕಕುಭದಿಭವಳುಕೆ ದನುಜಾ |
ನೀಕ ಬೆದರಿತು ಚದುರಿತೆಡೆಯೊಳು |
ಕಾಕತುಂಡಾದಿಗಳು ನುಸುಳಿದರೋಡಿ ಬಿದ್ದೆದ್ದು || ೧ || ೨೫೦ ||

**ಸೌರಾಷ್ಟ್ರ - ತ್ರಿವುಡೆ**
ನೋಡುತಲಿ ಶಂಬರನಿದೇನೆಂ |
ದಾಡುತಚ್ಚರಿಯಿಂದ ಧೈರ್ಯವ |
ಗೂಡಿಸುತ ಕೂಡಿಸಿದ ಭಟರ | ನ್ನೀಡುತಭಯ || ೧ ||
ಧರೆದೆರೆಯೆ ಬಾಯಬುಧಿ ಮುಂದೈ |
ತರೆ ತುಷಾರಾಚಲ ಮಗುಚೆ ನಭ |
ಜರಿಯೆ ತ್ರೈಮೂರ್ತಿಗಳು ಬರೆ ಹಿಂ | ಜರಿವುದುಂಟೆ || ೨ ||
ನಿನದಕಂಜುವರಹಹ ನಗೆಗೇ |
ಡೆನುವುದರಿಯರೆ ಹರಹರಾ ಭೀ |
ಘನತೆಯೇ ಸುಡುಸುಡಿರಿ ನಿಮ್ಮಯ | ಜನುಮವನ್ನು || ೩ ||
ಸಾಕು ನಾನಿರಲಕಟ ಭೀತಿಯ |
ದೇಕೆ ಬಿಡಿ ಬಿಡಿರಭಯವಿತ್ತಿಹೆ |
ನೀ ಕಡೆಯ ದೇಗುಲದಿ ನೋಡಿರಿ | ಕಾಕುಜನರ || ೪ ||
ಜಯವು ನಮಗೀಗಾಯ್ತು ಬನ್ನಿರಿ |
ಬಯಕೆ ಗರ್ಭಿಣಿಗಾಯ್ತು ಬನ್ನಿರಿ |
ಬಯಸಿರುವ ನರರಿಹರು ಬನ್ನಿರಿ | ಭಯವ ಬಿಟ್ಟು || ೫ || ೨೫೫ ||

**ಶಾರ್ದೂಲವಿಕ್ರೀಡಿತ ವೃತ್ತ**
ಮಾಯಾವಿದ್ಯೆಯ ಬಲ್ಲ ಕುಂಭಕಚ ತಾಂ | ಬಿಟ್ಟಿಂತು ಸ್ವಂರೂಪಮಂ |
ಮಾಯಾವಿದ್ಯೆಯನಾಂತು ಕಾಲವನಿತಾಗರ್ಭೋದ್ಭವಂ ಕಾಲಜಂ ||
ಮಾಯಾ ಗಂಧವಹಾತ್ಮಜಮ್ಮೆನೆ ಮಹಾ | ಮಾಯಾ ಶಚೀನಾಥಜಂ |
ಮಾಯಾ ನಿರ್ಜರ ವೈದ್ಯಜಾತರಿವನೆಂಬೋಲ್ ತೋರ್ದ ತದ್ರೂಪದಿಂ || ೧ ||

**ಮಾರವಿ - ಏಕ**
ಆರ್ಯಾಲಯದೊಳ | ಗರ್ಯಮನುಂತುರಿ |
ವಾರ್ಯರ ಕಾಣುತ್ತಾ ||
ಶೌರ್ಯನು ಚರರೊಳು | ಶೌರ್ಯದಿ ವಿಕ್ರಮ |
ವರ್ಯರೊಳೆಂದೆನುತ || ೧ ||
ತಡೆಯಿರಿ ಸುಭಟರು | ಸುಡಿ ಸುಡಿ ಜನ್ಯವ |
ಬಿಡಿ ಬಿಡಿ ಭಯ ಮನದಿ ||
ಹಿಡಿಯಿರಿ ಛಲವನು | ತೊಡಿ ತೊಡಿ ಧನುಶರ |
ಪಿಡಿಯಿರಿ ಬಲತಟದಿ || ೨ ||
ನಡೆಯಿರಿ ಮುಂದಕೆ | ಕೊಡಿ ಕೊಡಿ ಸಂಗರ |
ಝುಡಿಯಿರಿ ಸಬ್ಬಳದಿ ||
ಬಡಿಯಿರಿ ದಂಡದಿ | ಪಿಡಿಯಿರಿ ಖಡುಗವ |
ಕಡಿಯಿರಿ ತಲೆ ಜವದಿ || ೩ || ೨೫೯ ||

**ಘಂಟಾರವ - ಅಷ್ಟ**
ಜಾಲಗಾರರ | ಮೌಲಿವರ್ಧನ ಸೈನ್ಯ ||
ಪಾಲ ಜಾಲಿ ಕ | ಪಾಲಿಯಂದದಿ |
ಕೇಳಿ ಕೋಲ್ ಪಿಡಿದೆಂದನು || ೧ ||
ಹೇ ಮನುಷ್ಯರೇ | ಸ್ವಾಮಿ ಭಕ್ತಿಯನಿಟ್ಟು ||
ಸಾಮದಿಂ ತಲೆಗೊಡುವಿರೋ ಸಂ |
ಗ್ರಾಮದಿಂ ತಲೆಗಡಿಯಲೋ || ೨ ||
ಸಹಿಸದೀ ಮಾತ | ಸಹಸದಿ ಸಹದೇವ ||
ವಹಿಸಿ ಸಹಜರ | ವಿಹಿತವನ್ನೆ |
ದ್ವಹಿತಗೆಂದನು ನಿಂದಿಸಿ || ೩ || ೨೬೨ ||

**ಭೈರವಿ - ಏಕ**
ನೀಚಾಧಮ ನೀನಾರೋ | ಬಹು |
ವಾಚಾಳಿಯು ನಿಜ ತೋರೋ ||
ಕೈ ಚಳಕವ ಪರಿಕಿಸುವೆ | ನಾ |
ರಾಚದಿ ಶಿರವನ್ನರಿವೆ || ೧ ||
ಈ ಶಂಬರ ಬಲಕಾನೆ | ಪತಿ |
ಈಶಂ ಬರಲಂಜುವೆನೆ ||
ನೀ ಶಿರ ಕೊಡು ಕೊಡು ಧೂರ್ತ | ಧುರ |
ದಾಸೆಯ ಬಿಡು ಬಿಡು ವ್ಯರ್ಥ || ೨ ||
ಸಾಕೆಲೊ ಪೌರುಷ ತಲೆಯ | ಕೊಡ |
ಲಾಸುರಿಯಂತೀಕ್ಷಿಪೆಯ ||
ಭೇಕವು ಫಣಿಗೆಣೆಯಹುದೇ | ಮೃತಿ |
ಗೀ ಕಾಲವು ತಪ್ಪುವುದೇ || ೩ ||
ಒದರದಿರೆಲೊ ನೀ ತರಳ | ನೋ |
ಡಿದರೊಳು ಕಡಿವೆನು ಕೊರಳ ||
ಉದರದಿ ಸುರಿಸುವೆ ಕರುಳ |
ಎನುತಧಮನೆಸೆಯೆ ನಿಡುಸರಳ || ೪ ||

ಕಡಿದೆಚ್ಚನು ಕವಲಂಬ | ಖಳ |
ಖಡುಗವ ಪಿಡಿಯುತ ತಿಂಬ ||
ಒಡಲನು ತೋರುತ ಬಂದ | ಇವ |
ತಡೆಯದೆ ಕಡಿದಿಂತೆಂದ || ೫ || ೨೬೭ ||

**ಕಂದ**

ಜಾಲಿಯೆ ನಿನ್ನಯ ವಿಕ್ರಮ |
ಜಾಲವನೀ ಶಕ್ತಿಯಿಂದ ಮುಗಿಸದಿರಲ್ಕಾಂ ||
ಕೋಲ ಪಿಡಿಯೆನೆಂದಿಡೆ ಯಮ |
ನಾಲಯಕೈದಲು ಸಮೂಹ ಸವರುತ್ತೀರ್ದಂ || ೧ || ೨೬೮ ||

**ವಾರ್ಧಕ**

ಜ್ವಾಲಿಗಂ ನಕುಲ ಮಾಲಿಗೆ ಪಾರ್ಥ ತಾಮ್ರಾಕ್ಷ |
ಗಾಲಯಸ್ಥಾಣುಸಮ ಭೀಮನೇಕಶೃಂಗ |
ಬಾಲಕ ಘಟೋತ್ಕಚಂಗಿದಿರಾಂತು ಮಾರಾಂತು ಹೋರಾಡಲೇನೆಂಬೆನು ||
ಕಾಲನೂಳಿಗರಿಗಾ ಕಾಲಪಾಶದಲಿ ಕೈ |
ಕಾಲ ಬಿಗಿದೊಯ್ಯೆ ಲವಕಾಲ ನಿಲಲೆಡೆಯಿಲ್ಲ |
ಕಾಲಜಾನುಜರಸುರಕಾಲರೆಂಬಂತೆ ತತ್ಕಾಲಮಿದ್ದರಿದರಿದರು || ೧ || ೨೬೯ ||

**ಭೈರವಿ - ಝಂಪೆ**

ಅಸುರೇಶ ಬಿದ್ದ ಖಳ | ವಿಸರವಂ ಕಂಡು ಕ |
ರ್ಕಶನಾದದಿಂ ದಂತ | ಮಸೆಯುತ್ತ ಬರಲು || ೧ ||
ಕಂಡಾಗ ನಕುಲ ಕೋ | ದಂಡವನ್ನುಡಿಸಿ ರಿಪು |
ಗಂಡ ನಿಜ ನಿನ್ನ ತನು | ಖಂಡಿಸುವೆನೆಂದ || ೨ ||
ಕಡಿಯಲೋಸುಗುವೆ ತಂ | ದಿಡಿಸಿರುವೆನೈವರನು |
ಹುಡುಗಾಟಿಕೆಯೊ ಸಮರ | ಕೊಡು ತಲೆಯನೀಗ || ೩ ||
ಬಾಹುಜನ ಭೀತಿಯಿಂ | ದೇಹವಿಹ ಪರಿಯಂತ |
ಆಹವವ ಬಿಡೆನಂಬಿ | ಗೀ ಹುಡುಗುತನವೆ || ೪ ||
ಧುರಕೆನಗೆ ಸರಿಯಲ್ಲ | ಹಿರಿಯರನು ಬರಹೇಳು |
ಕೊರಳ ಕಾಯುವನಾವ | ನೊರೆ ಮೊದಲು ತರಿವೆ || ೫ || ೨೭೪ ||

**ಸಾವೇರಿ - ಮಟ್ಟೆ**

ಅಟ್ಟವೇರಲರಿಯದವನು | ಬೆಟ್ಟವಡರುವ ||
ಅಟ್ಟಹಾಸದಂತೆ ನೋಡು ಬಿಟ್ಟ ಬಾಣವ ||
ಕೆಟ್ಟ ಹುಡುಗನೆಂದು ತರಿದು | ಕೆಟ್ಟೆ ನೋಡಿಕೊ ||
ಕೊಟ್ಟ ಶರದಿ ತಲೆಯ ಕಳೆವೆ | ಕುಟ್ಟಿ ಬೇಡಿಕೊ || ೧ ||
ಎಂದು ಖಳನು ಪರ್ವತಾಸ್ತ್ರ | ದಿಂದ ಹೊಡೆಯಲು ||
ಇಂದ್ರತನಯನನುಜ ವಜ್ರ | ದಿಂದ ಕಡಿಯಲು ||
ಗಂಧವಾಹಮಿತ್ರ ಪತ್ರ | ಕಂದು ನಕುಲನು ||
ಕುಂದದಂಬುವಂಬಿನಿಂದ | ನಂದಿಸೀರ್ದನು || ೨ ||
ಕುಂಭಜನೊಲು ರೋಷವೆತ್ತು | ಶಂಬರಾಸುರ ||
ತುಂಬಿ ಮೋಹನಾಸ್ತ್ರವೆಸೆಯ | ಲಂಬು ಸುಭಟರ ||
ಕುಂಭಿನಿಯೊಳು ಕೆಡೆಯೆ ತಡೆದು | ಜಂಭಭೇದಿಜ ||
ಶಂಭುಪಾದ ಭಜಿಸು ಬಾಳ್ವ | ಜಂಬ ಬಿಡು ನಿಜ || ೩ || ೨೭೭ ||

**ಭೈರವಿ - ಅಷ್ಟ**

ಗರುವದ ಗಿರಿಯಡರಿ | ಬಂದಿರುವಾತ |
ನುರುಳಿದನೆಂಬುದರಿ||
ಗರುಡಗುರಗವು ಕೇಸರಿಗೆ ದಂತಿಯು ಸರಿ |
ಬರುವವೆ ನರಗುರಿಯೇ || ೧ ||

ವೀರಕೇಸರಿಯು ನಾನು | ಸಿಕ್ಕದು ಜಯ |
ವೀರಣದಲಿ ನಿನ್ನನು ||
ತೀರಿಸುವೆನು ಮೋಸ | ಗಾರ ಭೂಭಾರಕ |
ಸಾರು ಸಾರೆಂದೆಚ್ಚನು || ೨ ||
ತಿಂದು ತೇಗುವ ವಸ್ತುವು | ಸಂಹರಿಸುವು |
ದೊಂದು ಮಹೋತ್ಪಾತವು ||
ಬಂದರದಕೆ ಶಾಂತಿ | ಯಿಂದ ಕಳೆವೆ ಬಹು |
ಮಂದಿಯ ಹೊಡೆದಿಹೆನು || ೩ ||
ಕುಡಿಯಲಾಗುವುದೆನ್ನುತ | ವಿಷವ ಕುಡಿ |
ದಡೆ ಬದುಕುವರೆ ಧೂರ್ತ ||
ಅಡವಿಯೊಳಿಹ ನಮ್ಮ | ನೊಡನೆ ವಂಚಿಸುತ ತಂ |
ದಡಗಿಸಲೇಕೋ ಹೇಡಿ || ೪ ||
ಹೇಳಲೊಡೆಯನೊ ನೀನು | ಸಾಯುವ ಕಾಲ |
ಕೇಳಿಕೊಳ್ಳುವರನು ||
ಸೀಳಿ ಬಲಿಯಗೊಟ್ಟು | ಕಾಳಿಯ ಮೆಚ್ಚಿಪೆ |
ತಾಳು ತಾಳೆಂದೆಚ್ಚನು || ೫ || ೨೮೨ ||

**ಭಾಮಿನಿ**
ತರಿದ ಗಿರಿಯಹಿವಹ್ನಿ ವಾಯು ತಿ |
ಮಿರ ಧನಂಜಯನೆಚ್ಚಡಾ ಶಂ |
ಬರನು ಹೀರ ಗರುಡ ಜಲೋರಗ ತರಣಿಯಿಂ ಕಡಿದು ||
ತಿರುಹಿ ಶೂಲವನಿಡಲೊರಗೆ ನರ |
ಹರಿಯೊಲನಿಲೋದ್ಭವನು ಮೈಗೊ |
ಟ್ಟುರಿ ಮಸಗಿ ಗಂಭೀರಧ್ವಾನದಿ ಗರ್ಜಿಸುತಲೆಂದ || ೧ || ೨೮೩ ||

**ತುಜಾವಂತು - ಮಟ್ಟೆ**
ಪೋಗೆಲಾ ಗರ್ವಿಸದೆ ಹಿಂದಕೆ | ಪ್ರಾಣಸಹಿತ |
ಪೋಗೆಲಾ ಗರ್ವಿಸದೆ ಹಿಂದಕೆ || ಪ ||
ನಾಗವಾಹನಾತ್ಮಭವನ | ನೀಗ ಧುರದಿ ಗೆಲಿದ ಗರ್ವ |
ನೀಗಿ ಪಾದಯುಗವ ಪಿಡಿದು | ಬೇಗ ಕ್ಷಮೆಯ ಬೇಡು ಬೇಡು ||
ಭೋಗ ಯೋಗವಿರಲು ಬಿಡು ಹಗೆ | ನೋಡಿದರೆ ಗರುಡ |
ನಾಗ ಹರಿ ಕರೀಶ ಕೀಶಗೆ || ಸರಿಯೊ ಮರುಳೆ |
ಕೂಗಿ ಫಲವ ಕಾಣೆನಾಜಿಗೆ || ಮರುಳ ಮನೆಗೆ || ೧ ||
ಹುಡುಗ ಸಾಕು ಮುಚ್ಚು ಬಾಯ | ಬಡಿಕನೆಂಬುದರಿತೆ ನಿನ್ನ |
ಬುಡತುದಿಯನು ಪೇಳದಾರು | ಪಡೆದರಿಂಥ ಮಾಂಸತನುವ |
ಕೊಡಲು ನಮ್ಮ ತುತ್ತಿಗೆನ್ನುತ || ನೋಡಿದರೆ ತೋಷ |
ಕಡಲೊಳದ್ದಿತೆನ್ನ ಮನವು ತಾ || ಮೇಘವಾಹ |
ಗಡವಿಯಾಯ್ತು ಹಿಂದೆ ಕಾದುತ || ಕೆಡುವೆ ಕಡಿವೆ |
ಕೊಡು ಕೊಡೀಗ ಶಿರವ ಬಗ್ಗಿಸಿ || ಕರೆಯೊ ಕಾಯ್ವ |
ಒಡೆಯನನ್ನು ಹೆಮ್ಮೆ ತಗ್ಗಿಸಿ || ೨ ||
ದುರುಳ ನಿನಗೆ ನೀತಿಯರಿಯ | ದರಸ ಧರ್ಮದಂತೆ ಪೇಳ್ದೆ |
ಮರುತ ತಾತ ತಾಳು ಹರಣ | ಹರಿಪ ಯುಕ್ತಿ ಸುಲಭ ದೇಹ |
ಪರಿಕಿಸಿದಗೆ ಭೀತಿಯಾದುದೇ || ಪೂಡಲ್ಕೆ ಶರವ |
ಪರರಪೇಕ್ಷೆಯೇಕೆ ಗೆಲ್ಲದೆ || ಹಿಡಿಂಬನಸುವ |
ತರಿದ ಬಲು ಸ್ವಶಕ್ತಿ ಸಾಲದೆ || ಧಡಿಗ ಚೋರ |
ಗುರುವೆ ನಾನೆ ಭೀಮ ಕೇಳೆಲಾ | ದೈತ್ಯ ಸಾರಿ |
ಪೊರಳಿಚುವೆನು ನರಕ ಕೇಳೆಲ || ೩ || ೨೮೪ ||

**ಮಾರವಿ - ಏಕ**

ಸಾಕೆಲೊ ಪೌರುಷ | ಪೋಕ ಹುಡುಗ ತಾ |
ಳೀ ಕವಲಂಬೆಂದು ||
ಆ ಖಳ ಬಿಡೆ ಕಡಿ | ದೇಕ ಶರದಿ ರಥ |
ವಾಕಣಕುರುಳಿಸಿದ || ೧ ||
ಹೊಸ ಸ್ಯಂದನವ | ನ್ನಸುರನಡರುತಾ |
ಬಿಸಿಗದಿರಸ್ತ್ರದಿ | ಶ್ವಸನೋದ್ಭವ ಕಡಿ |
ದೆಸೆದನು ಶಕ್ತಿಯನು || ೨ ||
ಮಡಿದಶ್ವವು ರಥ | ಪುಡಿ ಪುಡಿಯಾಗಲು |
ಪಿಡಿದಸಿಯಂ ಬರಲು ||
ಬಡಿದನು ವಜ್ರದಿ | ಖಡುಗವು ಜಾರಿದು |
ದಡಗಿದ ಮಿಂಚಿನೊಲು || ೩ || ೨೮೯ ||

**ವಾರ್ಧಕ**

ಆಕಾಶದಿಂದರುಣಜಲಮಾಮಿಷೋಪಲಗ |
ಳಾ ಕಾಲದೊಳು ಬಿದ್ದುದಾಕುಜವ ಕಿತ್ತೆಸೆದ |
ಡೇಕ ಬ್ರಹ್ಮಾಸ್ತ್ರದಿಂದನಿಲಜನದಂ ಕಡಿದನಾಶರಂ ಚಿಂತಿಸುತಲಿ ||
ತಾ ಕತ್ತಲೆಯ ಗೈದು ಕರಿ ಸಿಂಹ ಹುಲಿ ಶರಭ |
ಸೂಕರಾದಿ ಮೃಗೌಘಮೈತರಲ್ ಶರದಿ ಕೊಲ |
ಲಾ ಖಗೇಶನೊಲ್ಕೈದೆ ಕೈಮುಗಿದು ನಿಲೆ ಭೀಮ ಭೈಮಿ ಕಂಡಡರಿ ನಭಕೆ || ೧ || ೨೯೦ ||

**ಘಂಟಾರವ - ಅಷ್ಟ**

ಒತ್ತಿ ತಾರ್ಕ್ಷ್ಯನ | ಕತ್ತು ಕೈಗಳೊಳ್ ಭೈಮಿ ||
ಪೃಥ್ವಿಗೆಳೆತರೆ | ಪೊತ್ತು ನಿಜವಂ |
ನಿಂತಿರಲ್ಕಿಂತೆಂದನು || ೧ ||
ಅರರೆ ಶಂಬರ | ದುರುಳತನವ ಬಿಟ್ಟು ||
ವಿರಚಿಸದೆ ಕಪಟವನು ನಿಂದಿದಿರ್ |
ಸರಿ ಸೆಣಸು ಕ್ಷತ್ರಿಯರೊಳು || ೨ ||
ಆರೆಲಾ ನೀನು | ಪಾರುಪತ್ಯವ ಗೈವ ||
ಕಾರಣವದೇನಿವರ ನಂಟತೆ |
ಸಾರು ಸಾರೆನಲೆಂದನು || ೩ ||
ತಾಯಿ ಗಂಡನು | ವಾಯುಜನದರಿಂದ ||
ಸಾಯಕದಿ ಹೊಯ್ದಾಡಿ ಜಯಿಸೆಲೊ |
ಮಾಯಕವ ಬಿಡು ಸಾರಿದೆ || ೪ ||
ಕುಲಕೆ ಮೃತ್ಯು ಕೊ | ಡಲಿ ಕಾವಿದೆಂಬಂತೆ ||
ಕಲಹಕೈತಂದುಲಿದು ಕೆಡಿಸುವೆ |
ತೊಲಗು ತೊಲಗೆಂದೆಚ್ಚನು || ೫ || ೨೯೫ ||

**ಮಾರವಿ - ಮಟ್ಟೆ**

ಅನಿಲಪೌತ್ರನು | ಕಡಿದು |
ಕನಲಿ ಶರವನು ||
ದನುಜ ಪಿಡಿದ ಧನುವಿಗೆಸೆದ |
ದನು ಕೆಡಹಿದನು || ೧ ||
ಪೊಸತು ಬಿಲ್ಲನು | ಪಿಡಿಯು |
ತೆಸೆಯಲಂಬನು ||
ಮಸೆದು ವೃಷ್ಟಿಗರೆಯಲಸ್ತ್ರ |
ವಿಸರ ಮುರಿದನು || ೨ ||

ಫಡಫಡೆನ್ನುತ | ಗದೆಯೊ |
ಳಿಡಲು ಭೈಮಿ ತಾ ||
ಕೆಡಹಲಸುರ | ಖಡುಗ ನೆಗಹೆ |
ಪಿಡಿದ ಕಸಿಯುತ || ೩ ||
ಮಲ್ಲಯುದ್ಧದ | ನಿಪುಣ |
ನಲ್ಲಿ ಗುದ್ದಿದ ||
ಹಲ್ಲ ಕಳೆದು | ಗಲ್ಲವೊಡೆದು |
ಮೆಲ್ಲನೊರಗಿದ || ೪ || ೨೯೯ ||

**ಕಂದ**
ಕುಂಭಿನಿಯೊಡೆಯನೆ ಲಾಲಿಸು |
ಶಂಬರ ಮೈಮರೆಯಲೀಕ್ಷಿಸುತ್ತಸಿ ಪಿಡಿದುಂ ||
ಕುಂಭೋತ್ಕಚ ನೆಗಹಲು ಬಳಿ |
ಕಂ ಭೀಮಾಗ್ರಜನು ಕಂಡು ತಡೆದಿಂತೆಂದಂ || ೧ || ೩೦೦ ||

**ಸಾಂಗತ್ಯ - ರೂಪಕ**
ತರಳ ಸೈರಿಸು ಬಿದ್ದ | ದುರುಳನ ಕಡಿಯಬೇ |
ಡರಸುತನಕೆ ವಿರೋಧವಿದು ||
ಧುರದಿ ಮೈ ಮರೆದನ | ತರಿವುದು ತಪ್ಪೆಂದು |
ಕರದ ಖಡ್ಗವಗೊಂಡನಂದು || ೧ ||
ಪೊಡವಿಗೆ ಭಾರನು ಬಿಡುವುದು ನೀತಿಯೆ |
ಕಡಿಯಲು ನಿಮ್ಮ ವಂಚಿಸುತ ||
ಅಡಗಿಸಿದಧಮನೊ | ಳೊಡಲುರಿಯೇನಯ್ಯ |
ಕೊಡು ಕೊಡು ಖಡುಗವನಿತ್ತ || ೨ ||
ಶರಹೀನ ಸ್ಮೃತಿಹೀನ | ಗರ್ವವರ್ಜಿತ ಭೀತ |
ಶರಣಾಗತನ ಮೌನ ವ್ರತನ ||
ಪೊರೆವುದು ನ್ಯಾಯವೆಂ | ದೊರೆವನ್ನೆಗಿತ್ತ ಶಂ |
ಬರ ನಿಂದಿಸುತ ಪೋದ ತನ್ನ || ೩ || ೩೦೩ ||

**(ಶಂಬರ ಶೋಕ)**

**ಭಾಮಿನಿ**
ಸೋತು ಶಂಬರ ಚಿಂತಿಸುಲಿತ್ತ |
ಯಾತುಧಾನಾಧೀಶ ಬಾಣನ |
ಮಾತನಾಡಿಸಿ ನೋಳ್ಪೆ ದುರ್ಹೃದರಳಿವಿಗೆಂದೆನುತ ||
ಆತ ತತ್ಕ್ಷಣ ತೆರಳೆ ಶೋಣಿತ |
ನಾಥನಲ್ಲಿಗೆ ಕಂಡು ಕೇಳಿದ |
ನೇತರದ ವ್ಯಥೆ ಪೇಳು ಪೇಳನಲೆಂದ ಮನದಿರವ || ೧ || ೩೦೪ ||

**ನೀಲಾಂಬರಿ - ರೂಪಕ**
ಮಡದಿಯ ಬಯಕೆಯ ಸಲಿಸ |
ಲ್ಕಡವಿಯೊಳಿಹರಂ ತರಿಸಿದೆ |
ಮೃಡನರ್ಧಾಂಗಿಗೆ ನರಬಲಿ | ಗೊಡುವರೆ ನಿಶ್ಚಯಿಸಿ ||
ಪಡೆ ನೆರಹುತ ಹೆಮ್ಮಾರಿಯ |
ಗುಡಿಯೆಡೆಗೈದಿರಲಾ ಬಡ |
ಹುಡುಗರು ಗೆಲಿದೆಲ್ಲರ ಕಂ | ಗೆಡಿಸಿದರೆಮ್ಮವರ || ೧ ||

ಏನೆಂಬೆನು ಮತ್ಪರಿಭವ |
ಪ್ರಾಣಸಮಾನನೆ ಬಾಣನೆ |
ತಾನಿಹೆನೆಂಬರ ಕಾಣೆ ನ | ವೀನ ಪರಿಸ್ಥಿತಿಗೆ ||
ಮಾನವರಿಂದಲಿ ರತ್ನಸ |
ಮಾನದ ಮಾನವು ಪೋದದು |
ದಾನವಕುಲತಿಲಕನೆ ಹಾ | ನೀನಿರಲಿಂತಾಯ್ತೇ || ೨ || ೩೦೬ ||

**ಕಂದ**

ಕೇಳ್ದಾ ಬಾಣಂ ರೋಷವ |
ತಾಳ್ದಾ ಶಂಬರಗೆ ಧೈರ್ಯವಂಗೊಟ್ಟಿಂದಂ ||
ಸೀಳ್ದಾ ಪಾಂಡವರಂ ಮೇಣ್ |
ತೋಳ್ದರ್ಪವ ತೋರ್ಪೆ ನೋಡೆನುತ್ತೈತಂದಂ || ೧ || ೩೦೭ ||

**(ಬಾಣ ಸಂಗ್ರಾಮ)**

**ಸೌರಾಷ್ಟ್ರ - ತ್ರಿವುಡೆ**

ಇತ್ತ ಭೈಮಿಯು ಶಂಬರನ ಬಲ |
ಮೊತ್ತವಟ್ಟುತ ಕೈ ಸೆರೆಯ ಪಿಡಿ |
ಯುತ್ತಿರಲು ಕುಂಭಾಂಡನೆನ್ನುವ | ಮಾತ್ಯ ತಡೆದ || ೧ ||
ಎಲವೊ ಸೇನಾಪತಿಯೆ ಬಿಡು ಬಿಡು |
ಬಲವ ಬಲಿಭವ ಸಚಿವನಲಿ ನೆಲೆ |
ನಿಲಿಸಿ ಛಲದಲಿ ನಿಲ್ಲು ಸಮರಕೆ | ಕಲಿತನದಲಿ || ೨ ||
ಕೆಂಡದಂತುರಿಯುಗುಳಿ ಘಡ ಕುಂ |
ಭಾಂಡ ಭಾಂಡದೊಲೊಡೆವ ತಲೆ ಬ್ರ |
ಹ್ಮಾಂಡ ಘಟದಿ ಘಟೋತ್ಕಚನು ನಾ | ಕಂಡರಿಯೆಯಾ || ೩ ||
ನಡುಗುವುದು ಮೂಲೋಕ ಭೀತಿಯ |
ಪಡೆದು ಶೋಣಿತಪಾಲ ಬಾಣಗೆ |
ಹುಡುಗ ಶರಣಾಗೆನಗೆ ಸಾರಿದೆ | ಕೆಡುವೆ ವ್ಯರ್ಥ || ೪ ||
ಮುಚ್ಚು ಬಾಯ್ಬಡಿವಾರ ಸಾಕೆಂ |
ದೆಚ್ಚಡೆಚ್ಚನು ಸೆಣಸಿ ಸಚಿವಂ |
ಗಿಚ್ಛೆ ತಪ್ಪಲು ನೋಡುತೀರ್ದನು | ಎಚ್ಚರದಲಿ || ೫ || ೩೦೨ ||

**ವಾರ್ಧಕ**

ಕ್ಷೋಣೀಂದ್ರ ಕೇಳತ್ತ ಮಣಿಮಯವರೂಥಮಂ |
ಬಾಣಾಸುರಮ್ಮೆಡರಿ ಕೋದಂಡವನ್ನೆತ್ತಿ |
ತೂಣೀರದೊಳ್ವಿಧವಿಧಾಸ್ತ್ರಂಗಳಂ ತುಂಬಿ ಗಂಭೀರನಾದದಿಂದ ||
ಕ್ಷೀಣಬಲಮನುಜರೆನಗೆಂತು ಸರಿ ಛೀ ಸುಪ |
ರ್ವಾಣರಂಜುವರಮಾತ್ಯನ ಗೆಲಿದರಿವರಿರಲಿ |
ತ್ರಾಣವ ಪರೀಕ್ಷಿಪೆನೆನುತ್ತೈದಿ ರಿಪುಗಳಿದಿರಾಂತನಂದಸುರೇಶನು || ೧ ||

**ಕಾಂಬೋಧಿ - ಝಂಪೆ**

ಪರಿಕಿಸುತ ಭೀಭತ್ಸು | ಭರಿತ ಶೌರ್ಯದಿ ಧನುವ |
ಸರಿಗೊಳಿಸಿ ಶರ ತೊಡುತಲೆದ್ದು ||
ಅರರೆ ನೀವಾರಿಲ್ಲಿ | ಬರಲೇಕೆ ಪೇಳು ನಿಜ |
ದಿರವ ಸಾಯದಿರೆಂದ ಝಡಿದು || ೧ ||
ಹುಲು ನರನೆ ಬಡಿವಾರ | ನಿಲಿಸು ಶೋಣಿತಪುರದ |
ಬಲಿ ಚಕ್ರವರ್ತಿಸುತನೆನಗೆ ||
ಬಲವೈರಿ ಮುಖ್ಯ ಸುರ | ಕುಲವು ಬೆದರಿದೆ ನಿನ್ನ |
ತಲೆ ಕಡಿಯುವೆನು ಮಾರಿ ಬಲಿಗೆ || ೨ ||

ಕಡಿಯುವುದಕವನಿಜವೆ | ಬಿಡುಗಣ್ಣರೊಡೆಯ ಪಿತ |
ಘಡ ಮೂರು ಲೋಕದಲಿ ವಿಜಯ ||
ಬಿಡುವವನೆ ನಾ ನಿನ್ನ | ಬಡಿದು ಕರ ಕಡಿ ಕಡಿವೆ |
ಪೊಡವಿ ಹೊರೆಯನು ಕಳೆವೆನಯ್ಯ || ೩ ||
ಹದಿನಾಲ್ಕು ಲೋಕದೊಳ | ಗಿದಿರಿಪ್ಪರಿಲ್ಲೆನಗೆ |
ಪದುಮಜಾಂಡದೊಳಡಗದವನೆ ||
ಮದದಾನೆಗಜ ಪಂಚ | ವದನಗಿಭ ಹುಲಿಗೆ ಶುನಿ |
ಹದಗೆಡಿಸಿದಂತಕ್ಕು ನರನೆ || ೪ ||
ಇರಲಿಲ್ಲ ಮೊದಲು ರಿಪು | ಗಿರಿ ಭಿದುರ ತಮ ದಿವಸ |
ಕರವನಕೆ ದಾವಾಗ್ನಿ ನೋಡು ||
ಉರಗ ತಾರ್ಕ್ಷ್ಯನು ಮೇಘ | ಮರುತ ಶರಧಿಗಗಸ್ತ್ಯ |
ಸರಿಯಾನು ತಿಳಿದು ಕ್ಷಮೆ ಬೇಡು || ೫ || ೩೧೮ ||

**ಸೌರಾಷ್ಟ್ರ - ತ್ರಿವುಡೆ**
ಭಾನು ಶಶಿ ದೇವರ್ಕಳೆನ್ನಾ |
ಜ್ಞಾನುವರ್ತಿಗಳೈಸೆ ಭವ ಮೃತಿ |
ಗಾನೆ ಕಾರಣನರಿಯದಲ್ಪ | ಜ್ಞಾನಿ ನೀನು || ೧ || ೩೧೯ ||

**ಸಾರಂಗ - ಅಷ್ಟ**
ವಿಧಿಯೆಂದೆ ತಿಳಿವೆನೆ ಮುಖವೊಂದೆ | ನೋಡೆ |
ವಿಧುವಲ್ಲ ಭುಜವು ಸಾವಿರವಿದೆ ||
ಮದನಾರಿಯೆಂದು ನಂಬುವನಲ್ಲ | ಫುಲ |
ಯದ ಕಣ್ಣು ಪಣೆಯೊಳ್ ಕಾಣುವುದಿಲ್ಲ || ೧ || ೩೨೦ ||

**ಸೌರಾಷ್ಟ್ರ - ತ್ರಿವುಡೆ**
ಮೃಡನು ನಾನೆನ್ನೊಳು ಪಿನಾಕಿಯು |
ಒಡೆತನವು ಸರಿ ಶ್ರಾದ್ಧದೇವನ |
ಪಿಡಿದು ಶಿಕ್ಷಿಸಬಲ್ಲೆನೆಲ್ಲರ | ಕಡುಹ ನಿಲಿಸಿ || ೧ || ೩೨೧ ||

**ಸಾರಂಗ - ಅಷ್ಟ**
ದುರುಳರೊಳಗೆ ನೀನು ನಿನ್ನೊಳು | ಇಕ್ಕು |
ದುರುಳತ್ವ ಶಿವಗೆಂತು ಸರಿ ಹೇಳು ||
ನರಿಯು ಮೈಸುಟ್ಟು ತಾ ಹುಲಿಯೆಂದು | ದೊಡ್ಡ |
ವರ ಹೆಸರಿಟ್ಟೇಕೆ ಬಾಳುವುದು || ೧ || ೩೨೨ ||

**ಸೌರಾಷ್ಟ್ರ - ತ್ರಿವುಡೆ**
ಕುರುಡ ಕಾಂಬನೆ ಕಿವುಡ ಕೇಳ್ವನೆ |
ಬರಡುಮತಿ ಹಿತ ತಿಳಿಯುವನೆ ಸೊ |
ಕ್ಕಿರುವ ಕೋಣನು ತಲೆಯ ಕಡಿವಡೆ | ನರಗುರಿ ಸರಿ || ೧ || ೩೨೩ ||

**ಸಾರಂಗ - ಅಷ್ಟ**
ಪೂತುರೆ ಕಟ್ಟಿಗೆ ಡೊಂಕನು | ಬೆಂಕಿ |
ಯೇ ತಿದ್ದಬೇಕು ಮೂರ್ಖನು ನೀನು ||
ಮಾತಿಗೆ ಮಾತನಾಡುವ ಯುಕ್ತಿ | ಇಲ್ಲ |
ಯಾತುಧಾನನೆ ತೋರಿಸೆಲೊ ಶಕ್ತಿ || ೧ || ೩೨೪ ||

**ಭೈರವಿ - ಮಟ್ಟೆ**
ಎಲವೊ ಬಾಲನೆಂದು ಯುದ್ಧ |
ಕೆಳಸದೊರೆದೆನು ||
ಸಲುಗೆಯಾದುದೊಂದು ಪೆಟ್ಟೆ |
ಗುಳಿಯೆಯೆಂದನು || ೧ ||
ಕೊಲುವ ಕಾವ ಕರ್ತ ಬೇರೆ
ತಿಳಿಸಿ ಬಿಡುವೆನು ||
ಛಲವನೋಡೆನುತ್ತ ಪಾರ್ಥ |
ನಲಗನೆಚ್ಚನು || ೨ ||
ಬಾಣ ತರಿದು ಖಾತಿಯಿಂದ |
ಬಾಣ ಬಿಟ್ಟನು ||
ಕಾಣದಂತೆ ಗೈದು ಶರವ |
ಪೋಣಿಸಿಟ್ಟನು || ೩ ||
ಶೋಣಿತೇಶ ಕೆಡಹುತದನು |
ತೂಣಿಯಿಂದಲಿ ||
ಸಾಣೆಯಲಗ ನೂರನೆಚ್ಚ |
ತ್ರಾಣದಿಂದಲಿ || ೪ ||
ಸೃಷ್ಟಿಪಾವರಜನು ಬಾಣ |
ವೃಷ್ಟಿಗರೆದನು ||
ನಷ್ಟಗೊಳಿಸಿ ಬಲಿಯ ಭವನು |
ಸೃಷ್ಟಶರವನು || ೫ ||
ಬಿಟ್ಟನದ ಕಿರೀಟಿ ಕಂಡು |
ಸಿಟ್ಟಿನಿಂದಲಿ ||
ಅಟ್ಟಿದನು ಪಿತಾಮಹಾಸ್ತ್ರ |
ಕೊಟ್ಟು ಛಲದಲಿ || ೬ || ೩೩೦ ||

**ಭಾಮಿನಿ**
ಭೂತಳಾಧಿಪವನಧರಿಸು ಬಲಿ |
ಜಾತ ಸಾವಿರ ಕರದಿ ಹರವರ |
ಜಾತ ಸತ್ವದಿ ಗೈದಡರ್ಜುನನೆರಡು ಕೈಗಳಲಿ ||
ಖಾತಿಯಿಂದೆಸಗುತ್ತ ಸಮರದಿ |
ಸೋತು ಸಂತಾಪದಲಿ ಕಂಸವಿ |
ಘಾತನೇ ಗತಿಯೆಂದು ಭಜಿಸಿದ ಭಕ್ತಿಭಾವದಲಿ || ೧ || ೩೩೧ ||

**(ಪಾರ್ಥಪ್ರಪತ್ತಿ)**

**ವಾರ್ಧಕ**
ಖಗರಾಜರಾಜ ಕರುಣಾಸಿಂಧು ಸಿಂಧುಸದ |
ನ ಗಜಾರಿಹಾರಿವದನಾಂಬುಜಾಂಬುಜಧಾರಿ |
ಜಗದೊಡೆಯನೊಡೆಯ ಸೇವಿಪ ಭೃತ್ಯ ಭೃತ್ಯ ಗೋಪಾಲ ಬಾಲಕ ಪಾಲಕ ||
ಖಗದೀಪ ದೀಪಕರ ಕರಶಂಖ ಶಂಕರಸ |
ಖ ಗಣಾಧಿಪಾಧಿಪ ಸೃಷ್ಟಿ ಕರ್ತಾಕರ್ತ |
ಗಗನಾಭನಾಭಸರಸಿಜ ಚಕ್ರಿ ಚಕ್ರಿ ತಲ್ಪಕ ದಕ್ಷಶಿಕ್ಷ ಪಕ್ಷ || ೧ || ೩೩೨ ||

**ನೀಲಾಂಬರಿ - ಆದಿ**
ದೇವ ದೇವನೆ | ಭಾವಭಾವನೆ ||
ಕಾವ ಕೋವಿದ | ಜೀವಕೌಷಧ || ೧ ||
ದುರುಳ ಶಿಕ್ಷಕ | ಶರಣ ರಕ್ಷಕ ||
ಕರುಣ ವಾರಿಧೇ | ಚರಣ ನಂಬಿದೆ || ೨ ||

ವಿಷ್ಣುರೂಪನೇ | ಜಿಷ್ಣು ಸಹಜನೇ ||
ಉಷ್ಣಕರನಿಭ | ಕೃಷ್ಣ ಬೇಗ ಬಾ || ೩ || ೩೩೫ ||

**(ಭಾಮಾಕೃಷ್ಣಸಂಲಾಪ)**

**ಕಂದ**
ಬಗೆ ಬಗೆ ಭಜಿಸಲ್ಕಿತ್ತಂ |
ನಗಧರ ದ್ವಾರಕಿಯೊಳೋಲಗವಗೊಡಲಾಗಳ್ ||
ನಗುತೇಳಲ್ ಭಾಮಾಮಣಿ |
ಖಗವಾಹನೊಳಿಂತು ಪ್ರಶ್ನೆಯನು ತಾ ಗೈದಳ್ || ೧ || ೩೩೬ ||

**ನೀಲಾಂಬರಿ - ರೂಪಕ**
ಪ್ರಾಣಪ್ರಿಯನೆ ಪೋಪು | ದೇನಿದೆತ್ತಣವೆಂಬು |
ದಾನು ಕೇಳುವೆ ಕರು | ಣಾನಿಧಿ ತಿಳುಹು || ೧ || ೩೩೭ ||

**ನವರೋಜು - ಏಕ**
ವಾರಿಜಸುಂದರನಯನೇ | ಮದ |
ವಾರಣಬಂಧುರಗಮನೆ ||
ತೀರದು ಪೋಗದೆ | ಸಾರುವೆನೀಕ್ಷಣ |
ಕಾರಣ ತಿಳುಹೆನು | ದಾರಾಳಿ ರನ್ನಳೆ || ೧ || ೩೩೮ ||

**ನೀಲಾಂಬರಿ - ರೂಪಕ**
ಅರಿಯಲಾರೆನೆ ಕಾಂತ | ತರಳೆಯರ್ಮನೆ ಮನೆ ||
ತಿರುಗುವ ತ್ವರಿತವ | ತೊರೆಯುವಡರಿಯ || ೧ || ೩೩೯ ||

**ನವರೋಜು - ಏಕ**
ವನಜಾತಾಸ್ಯಳೆ ಕೇಳು | ಪರ |
ವನಿತೆಯರೆಂಬುದು ಗೋಳು ||
ಕನಸಲಿ ನೆನೆಸೆನು | ನಿನಗೇಂ ಬವರವು |
ಘನಕಾರಣವಿಹು | ದನುಮಾನವ ಬಿಡು || ೧ || ೩೪೦ ||

**ನೀಲಾಂಬರಿ - ರೂಪಕ**
ಸುಪವಿತ್ರನಹುದು ನೀ | ಕಪಟನಾಟಕ ನಿನ್ನ |
ಗುಪಿತವೇನದು ನೀ ವಂ | ಚಿಪುದೇಕೆ ಪೇಳು || ೧ || ೩೪೧ ||

**ನವರೋಜು - ಏಕ**
ಅಂತರ್ಯವನು ನಿನಗೆ | ನಾ |
ನೆಂತು ಪೇಳುವೆನೆಲೆಗೆ ||
ಪಂಥವಗೈದರು | ಕಾಂತೆಯರೊಳು ಗು |
ಟ್ಟಂ ತಾಳುವುದರಿ | ದುಂ ತರುಣೀಮಣಿ || ೧ || ೩೪೨ ||

**ಭಾಮಿನಿ**
ಸಾಸಿರೆಂದರು ಕಾಂತ ಮಿಕ್ಕ ಸು |
ವಾಸಿನಿಯರಿಗೆ ತಿಳಿಸೆನೆನ್ನಲು |
ವಾಸುದೇವನು ಪಾಂಡವರ ಪರಿಭವವ ತಿಳುಹಿಸಲು ||
ಈಸು ವ್ಯಥೆಯೇಕವರ ನಂಟತೆ |
ಗಾಸಿಯಪ್ಪುದೆ ಬೇಡ ಸಂಗರ |
ದಾಸೆ ತ್ಯಜಿಸೆನಲೆಂದ ಮುನ್ನಿನ ಬಂಧುಪಾಶವನು || ೧ ||

ತಾತನನುಜೆ ಪೃಥಾಖ್ಯೆಯೋರ್ವಳ |
ಭೂತಳಾಧಿಪ ಕುಂತಿಭೋಜನು |
ಜಾತರಿಲ್ಲದಿರಲ್ಕೆ ದತ್ತ ವಿಧಾನದಿಂ ಗೊಳಲು ||
ಶೀತಕರಕುಲಪಾಂಡು ವರಿಸ |
ಲ್ಕಾ ತಳೋದರಿ ಸುತರು ಭಾವುಕರ್ |
ಪ್ರೀತಿಸುವೆನೆನಲೊಪ್ಪಲೈದಿದನರ್ಜುನನ ಬಳಿಗೆ || ೨ || ೩೪೪ ||

**(ಅಭಯಪ್ರದಾನ)**

**ಮಾಲಿನೀ ವೃತ್ತ**
ಎರಗುತಡಿಗೆ ಭೀಭತ್ಸ್ವಶ್ರುವಿಂ ತೋಯ್ದು ಸೂಯ್ದು |
ತ್ವರಿಸಲರಿಯದಿಂತಾಂ ಚಿಂತಿಸಲ್ಕಂತು ಧೇನುಂ ||
ಕರುವಿನುರುರವಕ್ಕೋಡಿ ಬಂದಂತೆ ತಾನುಂ |
ಧುರದಿ ವಿಜಯನೆಂಬೊಂದಾಖ್ಯೆಯಂ ಪಾಲಿಸೆಂದಂ || ೧ || ೩೪೫ ||

**ಬೇಗಡೆ - ಅಷ್ಟ**
ಉತ್ಸಾಹ ಸಾಹಸ ಶೌರ್ಯ | ಭೋಭೀ |
ಭತ್ಸೊ ಸುಮತಿ ಶಕ್ತಿ ಶೌರ್ಯ ||
ವತ್ಸನೆ ಹಿಡಿದಡೆ | ತ್ವತ್ಸಮಾನರ ಕಾಣೆ |
ಮತ್ಸಹಾಯವನೀವೆನೆನೆ ಶ್ರೀ |
ವತ್ಸಲಾಂಛನಗೆರಗುತೆದ್ದನು || ೧ ||
ಪಿಡಿದು ಚಾಪಾಂಬುಗಳನ್ನು | ಪೋಗಿ |
ತಡೆದು ಬಾಣಾಸುರನನ್ನು ||
ಕೊಡು ಸಂಗರವನೀಗ | ಧಡಿಗತನವ ನೋಡು |
ಜಡಜನಾಭನ ಕರುಣದಿಂದಲಿ |
ಪೊಡವಿಗುರುಳಿಸಿ | ಬಿಡುವೆನೆಂದನು || ೨ ||
ಬೇಡ ಸಾರಿದೆನೀಗ ಯುದ್ಧ | ಬುದ್ಧಿ |
ಗೇಡಿ ನೀನೆಂಬುದು ಸಿದ್ಧ ||
ರೂಢಿಯೊಳಗೆ ಹೊರ | ಳಾಡಿ ದುಃಖಿಸಿದಾತ |
ಮೂಢ ನಿಜ ರಣಹೇಡಿ ನಿಲು ಚಂ |
ಡಾಡುವೆನು ಶಿರವರಿದು ನೋಡಿಕೊ || ೩ || ೩೪೬ ||

**ಕೇದಾರಗೌಳ - ಝಂಪೆ**
ಸೋತವರು ಗೆಲುವರೆಂಬ | ನಾಣ್ನುಡಿಯ |
ನೀ ತಿಳಿಯದಾದೆ ಹುಂಬ ||
ಯಾತುಧಾನನೆ ತೋರ್ಪೆನು | ಅಕ್ಷಯವಿ |
ದಾತುಕೊಳ್ಳೆನುತೆಚ್ಚನು || ೧ ||
ತರಿ ತರಿದು ಪೊಡೆದು ತೂಣ | ಪರಿಕಿಸಲು |
ಬರಿದಾಗಲಾಗ ಬಾಣ ||
ಶಿರಕೆ ಗದೆಯಿಂದ ಹೊಡೆದ | ಪಾರ್ಥನದ |
ಭರದಿಂದ ಕರದಿ ಪಿಡಿದ || ೨ ||
ಫಡಫಡೆಂದಾರ್ಭಟಿಸುತ | ಒರೆಯಿಂದ |
ಖಡುಗವಂ ಝಳಪಿಸುತ್ತಾ ||
ಕಡಿವೆನೆಂದೆತ್ತಲಲ್ಲಿ | ತುಂಡಿಸಿದ |
ಕಿಡಿ ಸೂಸಿ ಕಂಗಳಲ್ಲಿ || ೩ ||
ಒಮ್ಮೆ ಗೆಲಿದಿಹ ಗರ್ವವು | ಶಿರಕಡರಿ |
ಹೆಮ್ಮೆಯಿಂ ಬರ್ಪೆ ನಿಜವು ||
ಬೊಮ್ಮತಾತನ ಶಕ್ತಿಯ | ಜಪಿಸಿ ಬಿಡು |
ವೇಮ್ಮರೆಯದಿರು ಯುಕ್ತಿಯ || ೪ ||

ಎನುತ ಹರಿಯಂ ನೋಡಲು | ವಸುದೇವ |
ತನಯ ಶಕ್ತಿಯ ನೀಡಲು ||
ಘನವೇಗದಿಂದೆಚ್ಚನು | ಬಡಿಯಲದು |
ದನುಜಪತಿ ಮೈಮರೆತನು || ೫ || ೩೫೩ ||

**ಕಂದ**

ಸದ್ದಿಲ್ಲದೆ ಬಾಣಂ ಬಳಿ |
ಕೆದ್ದಪಜಯಮಪ್ಪ ಕಾರಣವ ಚಿಂತಿಸಿದಂ ||
ಯುದ್ಧದಿ ಮತ್ಕುಲರಿಪುವಿ |
ಲ್ಲಿದ್ದುದರಿಂ ಗೆಲುವ ಕಾಣೆನೇಗುವೆನೆಂದಂ || ೧ || ೩೫೪ ||

**ನೀಲಾಂಬರಿ - ರೂಪಕ**

ಹರ ಹರ ಶಿವ ಶಿವ ಶಂಕರ |
ಪುರಹರ ಪರತರ ಭಯಹರ |
ಧುರಪರಿಭವ ಪರಿಯರಿಯೆಯ |
ಗಿರಿಜಾಪತಿ ಗಿರಿಶ || ೧ ||
ಉರಗವಿಭೂಷಣ ಭೀಷಣ |
ಕರುಣಿಸಿ ಪೊರೆದಿಹೆ ಸೋತಿಹೆ |
ಹರಿತಂದಭಯವನೀಯುವ |
ಬಿರುದನು ಮರೆಯುವೆಯಾ || ೨ ||
ಸುರರ ನರರ ಚಾರಣ ಕಿ |
ನ್ನರ ಗುಹ್ಯಕರಸುರರ ಯ |
ಕ್ಷರ ಸಾಧ್ಯರ ಜಯಿಸಿದ ಯಶ |
ನರನಿಂದಳಿದುದಲ || ೩ || ೩೫೬ ||

**ಧನ್ಯಾಸಿ - ಅಷ್ಟ**

ಏನಯ್ಯ | ಬಾಣ | ಏನಯ್ಯ || ಪ ||
ಏನಯ್ಯ ಬಾಣ ನಿನ್ನಯ ಯೋಗ್ಯತೆಗೆ ಸರಿ |
ಕಾಣೆನೀರೇಳು ಲೋಕಗಳಲ್ಲಿ || ನಾಮು |
ಕ್ಕಾನುವರಿಲ್ಲ ಸಂಗರದಲ್ಲಿ || ನಿನ್ನಾ |
ಜ್ಞಾನುವರ್ತಿಗಳೆಲ್ಲ ಬಗೆಯಲ್ಲಿ ||
ಬಲ್ಲಿದ ಸೃಷ್ಟಿಸ್ಥಿತಿಯ |
ಗೈಯುವೆ ಲಯಕೃತಿಯ || ಸ್ಥಾಣುವೆ ನೀನಾಗಿ |
ಹುಡಿಯೊಳು ಹೊರಳುವ |
ಹೀನಸ್ಥಿತಿಯ ಜೀವಚ್ಛವ ಬಲಿಭವ ಭಲಾ || ೧ || ೩೫೮ ||

**ಭಾಮಿನಿ**

ಎಲವೊ ಯಮನಂ ಶಿಕ್ಷಿಸುವ ಭಟ |
ಖಳಕುಲಾಗ್ರಣಿ ಮೂಢಮಣಿ ಹಗೆ |
ದಲೆಯೊಡೆವ ಸಾಹಸ್ರಕರಗಳು ಸೋತು ಕಂಗಳಲಿ ||
ಜಲವ ಸುರಿಸುತ ನೆಲನ ನೋಡುವ |
ಲಲನೆಯರ ಬಾಳ್ ಸುಡು ಸುಡೆನೆ ಶಿವ |
ತಿಳಿದು ಬಾಣನ ಬಳಿಗೆ ಬರಲೆರಗುತ್ತ ನುತಿಸಿದನು || ೧ || ೩೫೯ ||

**ವಾರ್ಧಕ**
ಜಯತು ಪಾತಾಳಪದ ಜಯತು ಧರಣೀಪೀಠ |
ಜಯ ಸತ್ಯಲೋಕಶಿರ ಜಯ ತಾರಸುಮಹಾರ |
ಜಯ ನವಗ್ರಹಕುಸುಮ ಜಯತು ತ್ರಿನೇತ್ರ ಜಯ ಸಪ್ತಸಾಗರಕುಕ್ಷಿಯೇ ||
ಜಯತು ಗಿರಿಶಿಖರಭುಜ ಜಯ ವೇದವಕ್ತ್ರ ಜಯ |
ಜಯ ದಶದಿಶಾಂಬರನೆ ಜಯ ವಿರಾಡ್‌ರೂಪ ಜಯ |
ಜಯ ಮಹಾದೇವ ದೇವೇಶ ಜಯಗೂಡಿಸೆನಲುಮೆಯರಸನಿಂತೆಂದನು || ೧ || ೩೬೦ ||

**ಕೇದಾರಗೌಳ - ಅಷ್ಟ**
ದನುಜೇಶ ನೀನೆ ನಾ | ನೆನುವದರಿಯುತರ |
ಮನೆಗೈದಿ ಸುಖದೊಳಿರು ||
ಗಣಗಳೊಡನೆ ಗೈವೆ | ರಣವನೆನ್ನಲು ದೈತ್ಯ |
ಗಣಪತಿ ತೆರಳಿದನು || ೧ ||
ಗಜಚರ್ಮಧರನಾಗ | ಭಜಿಸಲೈತರಲೆಂದ |
ಗಜವಕ್ತ್ರ ನಡೆ ಯುದ್ಧಕೆ ||
ರಜನೀಸಂಚರಬಾಣ | ಭಜಕನಾಗಿಹನು ಭೂ |
ಭುಜರ ಶಕ್ತಿಯನೀಕ್ಷಿಸು || ೨ ||
ಎನಲು ಹಸಾದವೆಂ | ದಣಕಿಸುತೈತರ |
ಲನಿತರೊಳನಿಲಜನು ||
ಮನೆ ಮನೆಗಳಿಗೋಡಿ | ಮನಬಂದ ತೆರದಿಂದ |
ಘನತೆಯಲ್ಲೆನಲೆಂದನು || ೩ ||
ಬಕಬಾಡಬಾಗಸ್ತ್ಯ | ವೃಕಕುಕ್ಷಿ ಕೇಳ್ ದಶ |
ಮುಖನನುಜರ ಭೋಜನ ||
ಸಕಲರು ಪೇಳುವ | ರಕಟದಾರಿದ್ರ್ಯ ಧಾ |
ರಕ ನಿತ್ಯ ತೃಪ್ತ ನಾನು || ೪ ||
ತಿಂದು ಜೀರ್ಣಿಪ ಶಕ್ತಿ | ಸಂದರತ್ಯಾಸೆಯೊ |
ಳಂದೋಡುತೊಡೆದುದರ ||
ದಂದಶೂಕನ ಸುತ್ತಿ | ದಂದದುಂದುರು ಹತ್ತಿ |
ಬಂದೆ ನಡೆಯಲಾರದೆ || ೫ || ೩೬೫ ||

**ಕೇದಾರಗೌಳ - ಝಂಪೆ**
ಉದರಪೋಷಣದರ್ಥಕೆ | ಗತಿಯಿಲ್ಲ |
ದಧಮ ಪೋಗೆಲೊ ಭಿಕ್ಷಕೆ ||
ಮೊದಲು ಪೂಜೆಯೊಳೆಲ್ಲರು | ತಿಂಡಿಗಳ |
ವಿಧವಿಧದೊಳೆನಗೀವರು || ೧ ||
ನಿತ್ಯಸಂತೃಪ್ತನೆನುವೆ | ತಿನಬೇಡ |
ಪಥ್ಯವಾಗದು ಬೀಳುವೆ ||
ಸತ್ಯವೇ ಜಯವು ನಮಗೆ | ಶರಗಳಿಂ |
ದಿತ್ಯರ್ಥ ಪೂಜೆ ನಿನಗೆ || ೨ ||
ಎಂದು ಚರಣಾದಿ ಶಿರದ | ಪರ್ಯಂತ |
ಕಂದು ಬಾಣಗಳ ಪೊಡೆದ |
ಚಂದನಾಂಗನು ತಾಳಿದ | ಕೋಪ ಶಿಖಿ |
ಯಿಂದ ಭೀಮಗೆ ಗುದ್ದಿದ || ೩ || ೩೬೮ ||

**ಕಂದ**
ಭೀಮನು ಮಲ್ಲಾಜಿಯೊಳುಂ |
ವಾಮನಕರಚರಣನನ್ನು ಸೋಲಿಸಲಿತ್ತಲ್ ||
ಭೀಮಕುಮಾರನ ಕಳುಹಲ್ |
ಕಾಮಾದ್ರಿಯ ಕಡೆಯ ಹುಟ್ಟಿನವ ತಡೆದೆಂದಂ || ೧ || ೩೬೯ ||

**ಮಾರವಿ - ಏಕ**
ಗುಹ ರಜತಾದ್ರಿಯ |ಗುಹೆಯನು ಬಿಟ್ಟು |
ಗ್ರಹದಿಂದೈತಂದು ||
ಅಹಿತವ ಗಳಿಸುವೆ |ಕುಹಕರ ಪಕ್ಷವು |
ವಿಹಿತವೆ ಪೇಳೆಂದ || ೧ ||
ತಾತನ ಮಾತನು | ಜಾತನು ಪ್ರೀತಿಯ |
ನಾತು ನಡೆಸಬೇಕು ||
ನೀತಿಯನೋತುರೆ | ಘಾತಿಸಿ ಭೂತಕೆ |
ಔತಣ ಗೈಸುವೆನು || ೨ ||
ಗೋವಿಂದನ ನಿಜ | ಸೇವಕರೊಳು ಕಠಿ |
ಣಾವಸ್ಥೆಯು ಧುರದಿ ||
ದೇವತನದ ಬಹು | ಭಾವನೆ ಬಿಡು ಸಹ |
ದೇವನೊಳೀ ದಿನದಿ || ೩ ||೩೭೨ ||

**ಭಾಮಿನಿ**
ಶೂರಪದ್ಮ ಮೃಗೇಂದ್ರಮುಖ ಖಳ |
ತಾರಕ ಹಿರಣ್ಯಕನ ಕ್ರೌಂಚನ |
ಸೂರಸುತಗೊಪ್ಪಿಸಿದೆ ಗಣ್ಯವೆ ತರಳನೆಂದೆಚ್ಚ ||
ಕ್ರೂರ ಕರ್ಮಿಗಳಳಿದರೆಂದದ |
ಸೂರೆಗೈಯುತ ಗುಣದಿ ಬಂಧಿಸೆ |
ವೀರಭದ್ರನ ಕಳುಹಲಾರ್ಭಟಿಸುತ್ತಲೈತಂದ || ೧ || ೩೭೩ ||

**ಘಂಟಾರವ - ಅಷ್ಟ**
ವೀರಭದ್ರನ | ವೀರವೇಷವ ಕಂಡು ||
ಮಾರುತಿಯು ತಡೆದೊಂದು ಗುದ್ದಿಂ |
ತೀರಿಸುವೆನೆನಲೆಂದನು || ೧ ||
ದಕ್ಷಬ್ರಹ್ಮನ | ಶಿಕ್ಷಿಸಿರುವುದನ್ನು ||
ಲಕ್ಷಿಸುತ ನೀ | ನೀಕ್ಷಣಾಜಿಯ |
ಪೇಕ್ಷೆ ಬಿಡು ಬಿಡು ಸಾರಿದೆ || ೨ ||
ಯುದ್ಧಗೈಯದ | ಬದ್ಧ ಮಾತುಗಳೇಕೊ ||
ಸಿದ್ಧನಿಹೆಯೆಂ | ದಿದ್ದ ಗದೆಯಿಂ |
ಭದ್ರಗೆರಗಲು ಬಿದ್ದನು || ೩ || ೩೭೪ ||

**ವಾರ್ಧಕ**
ಗಂಗಾಧರಂ ಪ್ರಮಥನಂ ಕಳುಹೆ ನಕುಲ ಪೊಡೆ |
ದಂ ಘನದಿ ಪಾರಿಷದಭೈರವ ಮಹಾಕಾಲ |
ಭೃಂಗಿ ರಿಟ ನಂದಿಗಳ ಕಳುಹಲವರ್ ಮುತ್ತಲೀಕ್ಷಿಸಿ ಘಟೋತ್ಕಚ ಮಾಯೆಯ ||
ಸಂಗರದಿ ಸುಳಿಗಾಳಿ ಗಿರಿ ತರುಗಳಿಂದ ಬಲ |
ಭಂಗಿಸಲ್ ಮಂತ್ರಾಸ್ತ್ರದಿಂದರ್ಜುನಂ ಜಯಿಸ |
ಲಂ ಗಜಾಂತಕನಚ್ಚರಿಯನಾಂತು ಬಂದು ವಾಸವ ಸುತನೊಳಿಂತೆಂದನು || ೧ || ೩೭೭ ||

**ಕೇದಾರಗೌಳ - ಝಂಪೆ**
ಹನುಮನಿದಿರೊಳು ಕಪ್ಪೆಯು | ಹಾರುವುದ |
ಕಣಿಯಾದೊಲಾಯ್ತು ಪರಿಯು ||
ರಣಕಿದಿರು ನಿಲ್ಲುವವರು | ಇಹದ ಸುಖ |
ಋಣವೆಲ್ಲ ತೀರಿದವರು || ೧ ||
ಅಣು ಮಹತ್ವಾಗದಿಹುದೇ | ಕಾಲಗತಿ |
ಯನುಸರಿಸಬೇಕೆಂಬುದೆ ||
ಸನುಮತವು ಪಿಂತಿರುಗೆನು | ಕ್ಷತ್ರಿಯರ |
ಜನುಮವೇಕೆನಲೆಂದನು || ೨ ||

ಆರು ನಾನೆಂಬುದನ್ನು | ನೋಡು ಲಯ |
ಕಾರಣದ ದೈವವಿನ್ನೂ ||
ಪೋರ ಬಾಹುಜ ಪಂಥವ | ಸರಿಕರೊಳು |
ತೋರು ನಡೆ ಸಂಗ್ರಾಮವ || ೩ || ೩೮೦ ||

**ಮಾರವಿ - ಏಕ**

ಸ್ಥಿರ ಚರರೊಳು ತಾ | ಸರಿಯೆಂಬುದು ನರ |
ಹರಿಯವತಾರದಲಿ ||
ಸ್ಥಿರಗೊಳಿಸಿದ ನಿಜ | ವರಿಯಲು ಬೇರೊಂ |
ದಿರುವುದೆ ಲೋಕದಲಿ || ೧ ||
ಅಳಿಯಲು ಸ್ಥಿರ ಚರ | ಪ್ರಳಯದೊಳಿದ್ದರೆ |
ಲಲನೇಶ್ವರನಾಗಿ ||
ಬೆಳೆಸಿದೆ ಸೃಷ್ಟಿಯ |ಕೆಲಸ ಮಹತ್ಕೃತಿ |
ತಳೆದುಳಿದವನಾರೈ || ೨ ||
ತಾಳೆಲೊ ಪ್ರಲಯದಿ | ಆಲದ ಪತ್ರದ |
ಮೇಲೆ ಮಲಗಿಕೊಂಡು ||
ಕೇಳೈ ಸೃಷ್ಟಿಯ | ಮೇಳೈಸಿದ ಹರಿ |
ಪೇಳದಿರರಿತಿಹೆನು || ೩ ||
ಶರಧಿಯ ಮಥಿಸಲು | ಗರಲೋದ್ಭವದಿಂ |
ದುರಿಯೆದ್ದೆಲ್ಲವರು ||
ಮರುಗಲು ಕುಡಿದದ | ಪೊರೆದವರನು ಶಂ |
ಕರನೆನಿಸಿದನಾರೈ || ೪ ||
ಅದಕಿತ್ತಿಹನವ | ವಿಧುವನು ವೇತನ |
ಕಧಮರನುಗ್ರಹದ ||
ಅದುಭುತ ಮರೆತೆಯ | ಬೆದರೆ ಭಸ್ಮಾಸುರ |
ಗದ ಬಿಡಿಸಿದನಾರೈ || ೫ ||
ಮಗಧಗೆ ಬೆದರು | ತ್ರಗದಿಂದಬುಧಿಗೆ |
ಚಿಗಿದೊಳಪೊಕ್ಕಡಗಿ ||
ಜಗದಿ ಬದುಕಿದವ | ನಿಗು ನಿನಗೆರಕವು |
ಬಗೆ ಬಲ್ಲೆನು ನರನೆ || ೬ ||
ಲಾಲಿಸು ಬ್ರಹ್ಮ ಕ | ಪಾಲವು ಪಿಡಿದಿರ |
ಲಾಲಸ್ಯದಿ ತಿರುಗಿ ||
ಗೋಳಾಡುತ್ತಿರೆ | ಪಾಲಿಸಿದವ ವನ |
ಮಾಲಿಯು ಮರೆತೆಯಲ || ೭ || ೩೮೭ ||

**ಭೈರವಿ - ಮಟ್ಟೆ**

ಕುಲವಿಹೀನ ಕೃಷ್ಣಭಕ್ತ |
ಛಲರೆ ಭಾಪುರೆ ||
ತಲೆಯ ಕಾವನನ್ನು ಕರೆಯೊ |
ಛಲವ ಬಿಡು ಖರೆ || ೧ ||
ಮಸಣದಲ್ಲಿ ಮರುಳು ಭೂತ |
ವಿಸರ ಕೂಡುತ ||
ಹಸನವೆಂದು ಕುಣಿವೆ ದಿಕ್ಕು |
ವಸನವೆನ್ನುತ || ೨ ||
ಮರುಳು ನರನೆ ವಹ್ನಿ ನಯನ |
ತೆರೆದು ನೋಡಲು ||
ಉರಿಯೊಳುಳಿದರುಂಟೆ ಸ್ಮರನ |
ಸ್ಮರಿಸು ಮನದೊಳು || ೩ ||

ಮಾಧವನ ಸಹಾಯದಿಂದ |
ಕಾದಿ ಜಯಿಸುವೆ ||
ಬೂದಿ ಬಸವ ಜೋಗಿ ಭಿಕ್ಷ |
ಕೈದು ಕಳುಹುವೆ || ೪ ||
ಮೇಲೆ ನೋಡು ಗಂಗೆ ಬಿಡಲು |
ತೇಲಿ ಹೋಗುವೆ ||
ವ್ಯಾಳಗಳನು ಕಳುಹಿ ಕಚ್ಚಿ |
ಕಾಲವಾಗುವೆ || ೫ ||
ಉಡುವಡಿಡುವಡುಂಬಡಿಲ್ಲ |
ದೊಡನೆ ಚರ್ಮವ ||
ತೊಡುತ ಹಾವ ಹೊತ್ತು ಬಿಕ್ಕೆ |
ಗೊಡಬಡುವ ಭವ || ೬ ||
ತರಳತನದ ಮಾತು ಸಾಕು |
ಧರಿಸು ಧನು ಶರ ||
ಪರಿಕಿಸುವೆನು ಶಕ್ತಿಯನ್ನು |
ತೊರೆದ ಶಂಕರ || ೭ || ೯೪ ||

**ಭಾಮಿನಿ**
ನರನು ಶರವೃಷ್ಟಿಯನುಗರೆಯಲು |
ಹರನು ವಜ್ರದಿ ಪೊಡೆಯೆ ಮೈಮರೆ |
ದೊರಗಲಸುರಾಂತಕನು ನೆಗಹುತ್ತುಪಚರಿಸುತೆಂದ ||
ಅರರೆ ನಾನಿರಲೇಕೆ ಬರಿದೇ |
ಗರುವದಿಂ ರಣಕೈದೆ ಕಲ್ಲಿಗೆ |
ಶಿರವ ಕುಟ್ಟಿದೊಲಕಟ ಬಿಡು ವ್ಯಥೆಯನ್ನುತಿದಿರಾದ || ೧ || ೯೫ ||

**(ಲೀಲಾಸಮರ)**

**ಸಾರಂಗ - ಅಷ್ಟ**
ಬರಿದೇತಕ್ಕೆತಂದೆ ಶಂಭುವೇ | ಪೂರ್ವಾ |
ಪರವೆಲ್ಲ ತಿಳುಹದಕೊರೆಯುವೆ ||
ಪರಮ ಸುಜನ ಭಕ್ತ ಜನ ಬಂಧು | ಎಂಬು |
ದರಿಯೆಯ ಬಿಡುವೆನೆ ನಾನಿಂದು || ೧ ||
ನಾನು ನಿನ್ನಂತೆ ಬಂದಿಹೆನಯ್ಯ | ಹೆಚ್ಚ |
ದೇನು ಸೇವಕ ಬಾಣನೆನ್ನಯ ||
ದಾನವಾಗ್ರಣಿಯ ಭಂಗಿಪುದೇಕೆ | ಪೇಳ |
ದೇನಾದರಾಗಲಿ ಬಿಡೆ ಜೋಕೆ || ೨ ||
ಅಷ್ಟು ಬಿಂಕದ ಮಾತ ನಿಲ್ಲಿಸು | ಧರ್ಮ |
ಭ್ರಷ್ಟರ ಪಕ್ಷವ ಬಿಡೆ ಲೇಸು ||
ಎಷ್ಟೆಂದರವರನ್ನು ಬಿಡೆ ನೀನು | ಸಾಕು |
ಶಿಷ್ಟರಿಗೆಸಗುಪಕೃತಿಯನ್ನು || ೩ ||
ಸುರರಸುರರ ಕೂಡಿ ಸುಧೆಯನ್ನು | ಹೊಂದಿ |
ತರುಣೀ ರೂಪದಿ ದೇವತತಿಗಿನ್ನು ||
ಎರೆದೆ ಯೋಚಿಸಲು ವಂಚಕ ಕೃತ್ಯ | ನಂಬಿ |
ಬರುವರಿಗಿಷ್ಟ ಮಾಡುವೆ ನಿತ್ಯ || ೪ ||
ನಡೆಸುವಾತನು ಭಕ್ತವರ್ಗವ | ನಾಶ |
ಪಡಿಸಲೇತಕೆ ಬಿಟ್ಟೆ ಸ್ವರ್ಗವ ||
ಪಡೆವತ್ಯಾಸೆಯೊಳು ಪೀಡಿಸುವುದ | ಕಂಡು |
ಒಡಬಡುತಲಿ ಶ್ಲಾಘಿಸುವುದದ || ೫ || ೪೦೦ ||

**ಭೈರವಿ - ಏಕ**
ಬಲಿ ಯಜ್ಞದಿ ಭಕ್ತಿಯಲಿ | ಕೊಡ |
ಲಿಳೆ ಮೂರಡಿ ದಾನದಲಿ ||
ತಳೆದು ತ್ರಿವಿಕ್ರಮನಾಗಿ | ತಲೆ |
ತುಳಿದಟ್ಟಿದೆ ಲೇಸಾಗಿ || ೧ ||
ಅದಕಾಯುಷ್ಯವನಂದೆ | ನೀ |
ಡಿದೆ ದಕ್ಷನ ನೀ ಕೊಂದೆ ||
ಮದನನ ಕಣ್ಗೆಚ್ಚಿನಲಿ | ದಹಿ |
ಸಿದೆ ಬೆಳೆಸಿದುದಾರಲ್ಲಿ || ೨ ||
ದಶವದನನಿಗಾಯುವನು | ಕರು |
ಣಿಸಿದೆನು ಬಿಡು ಕಂಸನನು ||
ಕಸುವಲಿ ಕೊಂದವನಾರೊ | ತುಸು |
ಬೆಸಸೀಗವನನು ತೋರೋ || ೩ ||
ಅವನಿವನಿವನವನೆಂದು | ಪೇ |
ಳುವ ಕವಲವ ಶಿವನಿಂದು ||
ಬವರವರವರವನಿಯೊಳು | ಪರಿ |
ಭವ ಭವ ತವ ಜವ ಕೇಳು || ೪ ||
ಬಿಡು ಬಿಡು ಹುಡುಗರ ಗೆದ್ದ | ಬಗೆ |
ಗೊಡಬಡುವುದೆ ಛಲ ಬದ್ಧ ||
ತೊಡು ತೊಡು ಕೊಡು ಸಮರವನು | ಘೋ |
ರ್ಗುಡಿಸಿಡುವೆನು ಶರವನ್ನು || ೫ || ೪೦೫ ||

**ಭೈರವಿ - ಮಟ್ಟೆ**
ಎಲೆ ಜಲಂಧರಾಖ್ಯನನ್ನು |
ಕೊಳುಗುಳದಲಿ ಗೆಲ್ಲಲರಿಯ |
ದಳಲಲವನ ಸತಿಯ ಧರ್ಮ | ಕಳೆದು ಕೊಲಿಸಿದೆ || ೧ ||
ಸತತ ಧರ್ಮಹಾನಿಗೈವ |
ಮತಿಯ ಭ್ರಷ್ಟ ಜಾರ ಚೋರ |
ಕೃತಕ ಕಪಟಿಯೆಂದು ವಿಶಿಖ | ವಿತತಿಯೆಚ್ಚನು || ೨ ||
ತರಿವುತೆಂದ ಮರೆತೆ ತ್ರಿಪುರ |
ಧುರದಿ ಸೋತ ಶಂಭು ವಿಧಿಯ |
ಕರುವ ಗೈದು ಸುರಭಿರೂಪ |ಧರಿಸಿ ಪೊರೆದುದ || ೩ || ೪೦೮ ||

**ಭಾಮಿನಿ**
ಪರಿಕಿಸಲು ತ್ವಚ್ಛಕ್ತಿಯಿಂದಾಂ |
ತರಿದುದಲ್ಲದೆ ಬೆದರಬಲ್ಲೆನೆ |
ಸುರಭಿ ವೃಷ ಬಕ ಸರ್ಪ ಸ್ತ್ರೀಯರ ಕೊಂದ ಬಗೆಯಲ್ಲ ||
ಧುರದಿ ಸೆಣಸೆನಲಾಗುರಿಜ್ವರ |
ವಿರಚಿಸುತ ಕಳುಹಲ್ಕೆ ವ್ಯಾಘ್ರಾಂ |
ಬರ ಬಿಸುಟು ಶೀತಜ್ವರವ ಸೃಜಿಸುತ್ತ ಹರನೆನಲು || ೧ ||
ವಿಷ್ಟರಶ್ರವ ನಿಲಿಸಿ ಚಕ್ರವ |
ನಷ್ಟಮೂರ್ತಿಗೆ ಬಿಡಲು ಕೋಪಾ |
ವಿಷ್ಟನಾಗುತ ಶೂಲ ಬಿಡಲಂಬರದಿ ಪೊಯ್ದಾಡೆ ||
ಕಷ್ಟದಿಂ ಸುರರಳಲುವುದ ಕ |
ರ್ಮಿಷ್ಠ ನಾರದ ತಿಳಿದು ನಡೆತಂ |
ದಿಷ್ಟಧಿಕ ಹೊಸ ಸುಪ್ರಸಂಗವಿದೇನು ಶರಣೆಂದ || ೨ || ೪೧೦ ||

**(ನಾರದ ಸಂಧಾನ)**

**ಸುರುಟಿ - ಏಕ**

ದೈತ್ಯಾಂತಕನೆಂದ | ಕೇಳೈ |
ಸತ್ಯದ ಮಾತೊಂದ ||
ಭೃತ್ಯರ ವರ್ಗದ | ಗತ್ಯದಿ ಕಲಹವ |
ನಿತ್ಯದಿ ಗೈಯುವ | ಕೃತ್ಯವನರಿಯೆಯ || ೧ ||
ಏ ನಾರದ ಬಾರೋ | ಭೇದವ |
ನೀನೆಸಗದೆ ತೋರೋ ||
ಬಾಣಗೆ ವರವ | ನ್ಯಾನಿತ್ತಿಹೆ ಬಿಡ |
ಲೇನೆಂಬರು ನುಡಿ | ಮೌನಿವರೇಣ್ಯನೆ || ೨ ||
ಬಾರೈ ನಾರದನೇ | ಧರ್ಮವ |
ತೋರೈ ಸಜ್ಜನನೇ ||
ಕ್ರೂರ ನಿಶಾಚರ | ದ್ವಾರವ ಪಾಲಿಪ |
ಚಾರಕಗೇತಕೆ | ಹೋರಾಟದ ಬಗೆ || ೩ ||
ಬೇಗೈದೀ ಕಡೆಗೆ | ಸುರಮುನಿ |
ಹೇಗೈ ಯೋಗ್ಯತೆಗೆ ||
ಭೋಗಿಶಯನ ಬಲಿ | ಬಾಗಿಲ ಕಾಯುವ |
ಜೋಗಿ ಯೋಗಿ ಬೈ | ರಾಗಿಯು ಸರಿ ಸರಿ || ೪ ||
ತ್ವರಿತದಿ ಬಾರಿತ್ತ | ನಾರದ |
ಪರಿಣಾಮವ ಮತ್ತಾ ||
ವರಕಪವಾದವ | ತರದಿರದೇಕೀ |
ಧುರದುರುಮರುಳಗೆ | ಒರೆ ಪೂರ್ವಾಪರ || ೫ || ೪೧೫ ||

**ಬೇಗಡೆ - ಆದಿ**

ಹರಿಹರನೆ ವಿಧು ಶಂಭು ಕೇಶವನೇ | ನಾರಾಯಣನೆ ಶಿವ |
ತಿರು ತಿರುಗಿ ಬಲು ನೊಂದೆ ಶಂಕರನೆ ||
ನಿರತ ಸಚರಾಚರವ ಪಾಲಿಪ |
ಪರಮಪುರುಷರಿಗೇನನೆಂಬೆನು |
ಬರಿದೆ ಪ್ರಳಯವ ಕಾಲದಲ್ಲಾ |
ದರೆ ಪ್ರಯೋಜನವೇನು ನೋಡಿರಿ || ೧ ||
ಧರಿಸಬೇಕೈ ಶೂಲ ಚಕ್ರವನು | ಎನಲೊಪ್ಪಿ ಕರೆಯಲು |
ಕರತಲದಿ ಶೋಭಿಸಲು ನಾರದನು ||
ಹರನೆ ಬ್ರಹ್ಮಕಪಾಲ ನಿನ್ನನು |
ತೊರೆಯದಿರಲದ ಬಿಡಿಸಿ ಭಾರತ |
ಧುರದಿ ರಕ್ತದಿ ತೃಪ್ತಿ ನಿನಗೆಂ |
ದಿರುವನದರಿಂದೀಗ ಲಾಲಿಸು || ೨ ||
ಬಾಣನಿಂಗೊರೆದಂತೆ ದ್ವಾರವನು | ಪಾಲಿಸಲು ವಚನ |
ಕ್ಷೋಣಿಪವಿಲ್ಲವು ಪಾಂಡವರ ನೀನು ||
ಹಾನಿಗೈಸಲು ಕಾರ್ಯ ಕೆಡುವುದು |
ಭಾನು ಶಶಿ ಸಂಚರಿಸರೆನಲು ಕೃ |
ಶಾನುರೇತಸನಪ್ಪಿ ಹರಿ ಸ |
ನ್ಮಾನದಿಂ ತೆರಳಿದನು ತೋಷದಿ || ೩ ||
ಫಲುಗುಣನ ಕರೆದೆಂದ ನಾರದನು | ಭೇದವನು ಹರಿಹರ |
ರೊಳು ಬಗೆಯಬೇಡಿನ್ನು ಸಾರಿದೆನು ||
ಉಳಿವುದೇ ಜಗಕರ್ತ ಮುನಿಯಲು |
ಒಲಿಸಲಿಷ್ಟಾರ್ಥವನು ಪಾಲಿಪ |
ಪ್ರಳಯಕರ್ತನ ಕೂಡೆ ಕಲಹವೆ |
ಭಲರೆ ನರಕನಿವಾಸ ತಪ್ಪದು || ೪ || ೪೧೯ ||

**ಭಾಮಿನಿ**
ಅರಿಯದೆಸಗಿದೆ ಧುರವ ಸಮಯಾಂ |
ತರದಿ ತಪದಿಂದೊಲಿಸುವೆನು ನಿಜ |
ಪರಿಯ ಕಂಡೆನೆನಲ್ಕೆ ನಾರದ ತೆರಳಲಂಬರಕೆ ||
ಹರಿಯ ಪದಕನುಜಾತರೊಂದಿಗೆ |
ಎರಗಿ ಧರ್ಮಜ ನುತಿಸಲೆತ್ತುತ |
ಹರಸಿ ಸದ್ಯದಿ ಸಿಗುವೆನೆಂದೈದಿದನು ದ್ವಾರಕಗೆ || ೧ || ೪೨೦ ||

**(ಸಪರ್ಯಾ)**

**ಕಂದ**
ಅಂತಕಸುತ ಸಹಭವರಿಂ |
ಮುಂತಿಹ ದೇವ್ಯಾಲಯ ಪ್ರವೇಶಿಸಿ ನಯದಿಂ ||
ಸಂತಸದಿಂ ಪೂಜಿಸಿ ಶಿವ |
ಕಾಂತೆಯ ನುತಿಸಿದನು ಭಕ್ತಿಭಾವಗಳಿಂದಂ || ೧ || ೪೨೧ ||

**ರೇಗುಪ್ತಿ - ರೂಪಕ**
ಕರುಣದಿಂದ | ಪರಿಕಿಸೀಗ |
ಪೊರೆಯೆ ಮಾತೆಯೆ ||
ಅರುಣವರ್ಣ | ಚರಣವನ್ನು |
ಮರೆಯೆ ದೇವಿಯೇ || ೧ ||
ಚಂದ್ರವದನೆ | ಕುಂದರದನೆ |
ಮಂದಹಾಸಿನಿ ||
ಬಂದು ಭುವಿಯೊ | ಳಿಂದುರತಿಯೊಲ್ |
ನಿಂದ ಕಮಲಿನೀ || ೨ ||
ಉರಗವೇಣಿ | ಸರಸವಾಣಿ |
ಹರನ ರಾಣಿಯೇ ||
ಜರೆಯ ತಮಕೆ | ತರಣಿರೂಪೆ |
ಕರುಣ ಮೂರ್ತಿಯೆ || ೩ ||
ದುರುಳ ನಾಶೆ | ಶರಣಪೋಷೆ |
ಭರಿತಪುಣ್ಯಳೇ ||
ದುರಿತಹಾರಿ | ಸರಸದೋರಿ |
ಪೊರೆವ ಶ್ರೀಕಳೆ || ೪ || ೪೨೫ ||

**(ಭೀಭತ್ಸ ಪರ್ವ)**

**ವಾರ್ಧಕ**
ಇಂದುಕುಲಜಾತ ಕೇಳತ್ತಲು ಘಟೋತ್ಕಚಂ |
ಮಂದಿರಗಳಂ ಪೊಕ್ಕು ರಕ್ಕಸರ ಬಡಿ ಬಡಿದು |
ಬಂಧಿಸುತ ಸೇನೆಯಂ ಕೂಡಿಸಿದ ಮುಕ್ಕೋಟಿ ಶಂಬರನ ಸತಿಗರ್ಭದ ||
ಸಿಂಧುವಿಂದುಗಿದು ಘೋರಾಕಾರವಂ ತಾಳಿ |
ಬಂದು ವಿದ್ಯುದ್ದಂಷ್ಟ್ರ ಬಾಯ್ದೆರೆದು ಸಕಲರನು |
ತಿಂದು ತೇಗುವೆನೆನ್ನುತಾರ್ಭಟಸುವಬ್ಬರವ ಕೇಳಿ ಭೈಮಿಯು ರೋಷದಿ || ೧ || ೪೨೬ ||

**ಘಂಟಾರವ - ಅಷ್ಟ**
ಘೋರ ರೂಪವ | ತಾ ರಚಿಸುತ ಬಂದು ||
ತೀರಿಸುವೆನೆಂ | ದಾರುಭಟಿಸುತ |
ಸಾರು ಸಾರೆನಲೆಂದನು || ೧ ||

ಸಾಕು ಸಾಕೆಲೊ | ಪೋಕತನದಿ ಸೇನಾ ||
ನೀಕಗಳ ಕೊಂಡೇಕೆ ಪೌರುಷ |
ಭೀಕರನೆ ಪುಡಿಗೈಯುವೆ || ೨ ||
ಖೂಳ ನಿನ್ನನು | ಸೀಳುತ್ತಲೀಕ್ಷಣ ||
ಕೇಳು ಬಲಿಯನು | ಕಾಳಿಗಿಕ್ಕುವೆ |
ತಾಳು ತಾಳೆನುತೆರಗಿದ || ೩ ||
ಒಬ್ಬರಿಂದೊಬ್ಬ | ರಬ್ಬರಿಸುತ ಮುಷ್ಟಿ ||
ಡಬ್ಬು ಡಿಬ್ಬೆನು | ತಿಬ್ಬರಿಬ್ಬದಿ |
ಹಬ್ಬುವೋಲ್ ಹೊಯ್ದಾಡಲು || ೪ ||
ಪಿಡಿದು ಕಾಲ್ಗಳ | ಬಡ ವಿದ್ಯುದ್ದಂಷ್ಟ್ರನ ||
ಬಡಿದು ತಲೆಯ | ನ್ನೊಡೆದು ದೇವಿಯ |
ಗುಡಿಗೆ ಬಂದದ ನೀಡಲು || ೫ || ೪೩೧ ||

**(ಉಪಸಂಹಾರ)**

**ಭಾಮಿನಿ**
ಕುಣಪವನು ಬಲಿಗೊಟ್ಟು ದೇವಿಯ |
ಮನವ ಮೆಚ್ಚಿಸೆ ಮೂರು ಕೋಟಿಯ |
ಗಣಗಳೊಡಗೂಡುತ ಘಟೋತ್ಕಚನೆಂದ ಧರ್ಮಜಗೆ ||
ಅಣಿಯಗೈದಿಹೆನೇಳಿರೆನಲವ |
ನನುಜರಿಂದೊಡಗೂಡುತೊಲವಿಂ |
ಜನನಿಯೆಡೆಗೈತಂದು ವಂದಿಸಲಪ್ಪಿ ಹರಸಿದಳು || ೧ || ೪೩೨ ||

**(ಉಪಾಯನ)**

**ಕೇದಾರಗೌಳ - ಅಷ್ಟ**
ಬಂದು ಹಿಡಿಂಬೆಯು | ವಂದಿಸುತೆಲ್ಲರಿ |
ಗಂದು ಭೋಜನಗೈಸಲು ||
ಚಂದದೊಳಾಭೈಮಿ | ಯೆಂದನು ಹಿರಿತಾತ |
ಗೊಂದು ಮಾತನು ನಮ್ರದಿ || ೧ ||
ಪಟ್ಟವ ವಹಿಸಿ ನ | ಮ್ಮಿಷ್ಟವ ನಡೆಸಬೇ |
ಕಿಷ್ಟೆ ಪ್ರಾರ್ಥಿಪೆನೆನ್ನಲು ||
ಸೃಷ್ಟಿಯೊಳ್ ಹಾಸ್ತಿನ | ಪಟ್ಟಣದಾಸನ |
ಬಿಟ್ಟು ಮತ್ತೊಂದೇರೆನು || ೨ ||
ಹಾಗಾದರಿನ್ನೊಂದ | ನಾಗು ಮಾಡಿಸು ತಂದೆ |
ಗೀಗ ಪಟ್ಟವ ರಚಿಸು ||
ಆಗದು ಮಗನೆ ಮುಂ | ದಾಗು ಹೋಗುಗಳುಂಟು |
ಯೋಗ ತಪ್ಪದು ನಿನಗೆ || ೩ ||
ಅನುಮಾನಿಸದೆ ಪಟ್ಟ | ಕಣಿಯಾಗು ಕಟ್ಟುವೆ |
ನಿನಗೆ ಹಿಡಿಂಬಾಖ್ಯದ ||
ವನವ ಸಂತಸದಿಂದ | ದನುಜಸೇನೆಯ ಕೂಡಿ |
ನೆನೆದಾಗ ಬರಬೇಕಯ್ಯ || ೪ ||
ಒರೆದಿಂತು ಧರ್ಮೇಶ | ಸರುವ ಸಮ್ಮತದಂತೆ |
ವಿರಚಿಸೆ ಪಟ್ಟವನು ||
ಹರಳಿನಾರತಿಯನ್ನು | ತರುಣಿಯರೆತ್ತಲು |
ಮೊರೆದವು ವಾದ್ಯಗಳು || ೫ || ೪೩೭ ||

**ಭಾಮಿನಿ**
ಕರವ ಕೊಡಲಸುರರನು ಮನ್ನಿಸ |
ಲೊರೆದ ಸಚಿವ ಸುಗರ್ತಗಿತ್ತಲು |
ತರತರದ ಕೈಗಾಣಿಕೆಗಳ ಯುಧಿಷ್ಠಿರಗೆ ಕೊಡಲು ||
ಹರುಷದಿಂ ಭೀಮಜ ಹಿಡಿಂಬೆಯ |
ರಿರುವುದೆನುತೆಲ್ಲರನು ಮನ್ನಿಸಿ |
ಪೊರಟನಂಬಾನುಜರ ಕೂಡುತ ಸುಜನ ಕಲ್ಪತರು || ೧ || ೪೩೮ ||

**ವಾರ್ಧಕ**
ಬಂದೇಕಚಕ್ರದಲಿ ಗಂಧವಾಹಾತ್ಮಜಂ |
ಕೊಂದು ಬಕನಂ ಪಾರ್ವರಿಂದಾಶಿಷವ ಪಡೆಯ |
ಲೊಂದುದಿನ ದ್ರುಪದಕುವರಿಗೆ ಸ್ವಯಂವರವೆಂಬ ಕಿಂವದಂತಿಯ ಕೇಳುತ ||
ಅಂಧಕಾಲದಿ ವಿಪ್ರರಂದದಿಂ ಪೋಗುತಿರೆ |
ಗಂಧರ್ವ ತಡೆಯಲಮರೇಂದ್ರಸುತ ಸೋಲಿಸುತ |
ಮುಂದೆ ಪಾಂಚಾಲಕೈತಂದು ಗುಪ್ತದೊಳಿರ್ದು ಸಂಧಿಸುತ ಸಭೆಯ ಪೊಕ್ಕು || ೧ ||
ಲಾಂಛನವ ಕಂಡು ಕತ್ತರಿಸಿ ಮತ್ಸ್ಯವ ಪಾರ್ಥ |
ಪಾಂಚಾಲಿಯನ್ನೊಲಿಸಿ ಮನ್ನಣೆಯ ಕೈಗೊಂಡು |
ಪಂಚಜನರೈತಂದು ಜನನಿಗೆರಗುತ ವಿಷಯ ವಿಸ್ತರಿಸಲಾಕುಂತಿಯು ||
ಪಂಚೇಂದ್ರಿಯಕೆ ತೃಪ್ತಿಯಾಗುತ್ತೈವರು ಭೋಗ |
ವಂಚಿಸದೆ ಪಡೆವುದೆನಲೊಪ್ಪುತಿಂದ್ರಪ್ರಸ್ಥ |
ಕಂ ಚಪಲದಿಂದೈದಿ ಸುಖಮೋದದಿಂದೀರ್ದರೆಂದ ವೈಶಂಪಾಯನ || ೨ || ೪೪೦ ||

**(ಸಮರ್ಪಣ)**

**ಸೌರಾಷ್ಟ್ರ - ತ್ರಿವುಡೆ**
ಹರಿಯ ಭಕ್ತರ ಚರಿತೆಯನು ವಿ |
ಸ್ತರಿಸೆ ಗೈದಿಹೆ ಯಕ್ಷಗಾನದೊ |
ಳರಿಯೆನೊಂದನು ಕುಂದು ಹೆಚ್ಚುಗ | ಳಿರಲು ತಿದ್ದಿ || ೧ ||
ಇದನು ಹಂಸಕ್ಷೀರ ನ್ಯಾಯದಿ |
ಮುದದಿ ಗ್ರಹಿಸುತ ಮೆರೆಸುವುದು ಹರಿ |
ಪದದೊಳರ್ಪಿಸಿ ವಂದಿಸುವೆ ನಾ | ಪದಗಳೆಲ್ಲ || ೨ ||
ದೋಷವೋ ಬಲು ಮೊಸವೋ ಸ |
ರ್ವೇಶ ಶ್ರೀಶನ ಧ್ಯಾನವೇ ಸಂ |
ತೋಷ ಸಾಧನ ಹೇ ಹರೇ ದೇ | ವೇಶ ದೇವ || ೩ || ೪೪೩ ||

**(ಪರಿಚಯ)**

**ವಾರ್ಧಕ**
ಎರಡನೆಯ ರಾಶ್ಯಬ್ದ ಹತ್ತನೆಯ ಮಾಸವೇ |
ಳರ ಪತಿಯ ವಾರ ಮೂವತ್ತನೆಯ ತಿಥಿಯು ಶಕ |
ವರುಷವೊಂದೆಂಟಾರು ನಾಲ್ಕನೆಯದೊಂಬತ್ತನೆಯ ಲಗ್ನದಲ್ಲೀಕೃತಿ ||
ಶರಧಿ ತಟ ಕುಂದಪುರ ತಾಲೋಕೊಳಿಹ ಕೊರಿಗೆ |
ಪುರದಿ ವಾಸಿಸುವ ಸೀತಾರಾಮ ಶಿಕ್ಷಕನ |
ತರಳನಹ ಸೂರ್ಯನಾರಾಯಣಾಹ್ವಯನಿದಂ ಮಂಗಲಂ ಗೈದೀರ್ಪೆನು || ೧ || ೪೪೪ ||

**ಮಂಗಲ**

**ಆಹೇರಿ - ಝಂಪೆ**
ಮಂಗಲಂ ಜಯ ಮಂಗಲಂ || ಪ ||
ಮಂಗಲಂ ಮಾಧವಗೆ | ತುಂಗಲೀಲಾಕರಗೆ |
ಮಂಗಲಾಂಗಿಯರರಸ ಗೋವಿಂದಗೆ ||
ಅಂಗಜನ ತಾತನಿಗೆ | ಶೃಂಗಾರಸಾರನಿಗೆ |
ಜಂಗಮಸ್ಥಾವರಾಧಾರ ಹರಿಗೆ || ೧ ||
ನೀರೊಳಾಡುವನಿಂಗೆ | ನೀರೊಳಿಪ್ಪವನಿಂಗೆ |
ನೀರ ಪೊಕ್ಕಾತನಿಗೆ  ನರಸಿಹ್ಮಗೆ ||
ನೀರ ಪೆತ್ತವಗೆ ಕೆ | ನ್ನೀರ ಹರಿಸಿದಗೆ ಮು |
ನ್ನೀರ ಮಾರ್ಗವ ಬಲಿದ ನೀಲಾಂಗಗೆ || ೨ ||
ವಸನಹೀನಗೆ ಕಲ್ಕಿ | ದಶರೂಪ ಧಾರನಿಗೆ |
ದಶದಿಶಾಂಬರಗೆ ಶಿವ ಶಂಭು ಶಂಕರಗೆ ||
ಶಶಿವದನೆ ಪಾರ್ವತಿಗೆ | ಕುಸುಮಗೃಹೆ ಭಾರ್ಗವಿಗೆ |
ಹೆಸರಾಂತ ಶಾರದೆಗೆ ವಾಗ್ರೂಪಿಗೆ || ೩ || ೪೪೭ ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪ್ರಜ್ಞಾದೀಪ್ತಿ ಪ್ರಕಾಶನ, ಕಟೀಲು, ಮಂಗಳೂರು

**ಪ್ರಸಂಗ ಪ್ರತಿ ಆಧಾರ:** ಪ್ರಜ್ಞಾದೀಪ್ತಿ ಪ್ರಕಾಶನ ಕಟೀಲು  ಮಂಗಳೂರು ಇವರಿಂದ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಗಿಂಡೀಮನೆ ಮೃತ್ಯುಂಜಯ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ, ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ

**ಅಂತರಜಾಲ ಪ್ರತಿ ಬರವಣಿಗೆ:** ಶಶಿಕಲಾ ಮೂರ್ತಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ,  ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ